ವಿಜಯಪುರ | ಸಂಪುಟ 04 | ಸಂಚಿಕೆ 140 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶುಕ್ರವಾರ, ಜುಲೈ, 24, 2026



"ದೇಶದ ಜನ ಮೋದಿ ಬೆನ್ನಿಗೆ ಇದ್ದಾರೆ, ನೀವು ಈ ಜಿರಳೆಗಳನ್ನು ಇಟ್ಟುಕೊಂಡು ಕ್ರಾಂತಿ ಮಾಡ್ತೀವಿ ಅಂತಾ ಹೇಳಿ ವಾಂತಿ ಮಾಡ್ತಿದ್ದೀರ, ಕಾಂಗ್ರೆಸ್ ಜನರ ವೋಟು ತಗೊಂಡು ಅಧಿಕಾರಕ್ಕೆ ಬರೋದಕ್ಕೆ ಆಗೋದಿಲ್ಲ, ಅದಕ್ಕೆ ಅಮೆರಿಕಾದ ಏಜೆಂಟ್ ಆಗಿ ಈ ಪ್ರಯತ್ನಕ್ಕೆ ಕೈ ಹಾಕಿದೆ."

■ ಪ್ರತಾಪಸಿಂಹ
ಮಾಜಿ ಸಂಸದರು

## ಜಗಳ ಹಚ್ಚುವುದು ಬಸನಗೌಡರ ಚಟ :ಹಮೀದ್ ಮುಶ್ರೀಫ್

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಾನು ಕೆಂಗನಾಳಗೆ ಅಂಜಿ ಓಡಿ ಹೋಗಿದ್ದೇನೆ ಎನ್ನುತ್ತೀರಿ, ಇನ್ನೊಂದು ಕಡೆ ಗೂಂಡಾ ಇರುವೆ ಎಂದು ಹೇಳುತ್ತೀರಿ, ನಿಮಗೆ ತಲೆಯಲ್ಲಿ ಸ್ವಲ್ಪವಾದರೂ ಬುದ್ಧಿ ಇದೆಯೋ ಅಥವಾ ಕೇವಲ ಮುಗ್ಧ ಜನರು ಠೇವಣಿ ಇರಿಸಿದ ಸಿದ್ಧಸಿರಿ ರೊಕ್ಕ ತುಂಬಿಕೊಂಡಿವೆಯೇ? ನಾನು ಗೂಂಡಾ ಎಂದು ಪದೇ ಪದೇ ಹೇಳುವ ನಗರ ಶಾಸಕ ಯತ್ನಾಳರ ಮೇಲೆ 40 ಕ್ಕೂ ಹೆಚ್ಚು ಪ್ರಕರಣಗಳಿವೆ, ಹಾಗಾದರೆ ನಿಜವಾದ ಗೂಂಡಾ ಯಾರು? ಎಂಬುದನ್ನು ಮೊದಲು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಕೆಪಿಸಿಸಿ ಸದಸ್ಯ ಅಬ್ದುಲ್ ಹಮೀದ್ ಮುಶ್ರೀಫ್ ವಾಗ್ದಾಳಿ ನಡೆಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಗಳ ಹಚ್ಚುವುದು ಬಸನಗೌಡರ ಚಟ, ಹಿಂಧೂ-ಮುಸ್ಲಿಂ ಎಂಬ ಬೇಧ ಭಾವ ಜನತೆ ಎಂದೂ ಮಾಡುವುದಿಲ್ಲ, ಅವರ ಜೊತೆ ನೇರ ಸೆಣಸಾಟಕ್ಕೆ ನಾನು ಸಿದ್ಧ, ಹೀಗಾಗಿ ಜನರನ್ನು, ಅಮಾಯಕರನ್ನು ಎಳೆದು ತರಬೇಡಿ ಎಂದರು. ಯುವಕರಿಗೆ ಉದ್ಯೋಗ ಮಾಡಲು ಸಹಾಯ ಕಲ್ಪಿಸಿ, ಹಿಂದೂ ಬಾಂಧವರಿಗಾದರೂ ಉದ್ಯೋಗ ಹಚ್ಚಿಕೊಡಿ ಕೇವಲ ದ್ವೇಷ ಹರಡಿಸುವುದನ್ನು ಕಲಿಸಬೇಡಿ ಎಂದರು.

ಬೇರೆ ಭಾಗದವರ ಮತದಾರರ ಹೆಸರುಗಳನ್ನು ಶಿಫ್ಟಿಂಗ್ ಎಂಬ ಹೆಸ-ರಿನಲ್ಲಿ ಸಿದ್ಧಸಿರಿ ಸೌಹಾರ್ದ ಸಿಬ್ಬಂದಿ ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡುತ್ತಿದ್ದಾರೆ, ನಿಜವಾಗಿ ಶಿಫ್ಟ್ ಆದವರಿದ್ದರೆ ಅವರ ಹೆಸರು ಸೇ-ರಿಸಲಿ, ಮೃತಪಟ್ಟವರ ಹೆಸರು, ಎರಡು ಕಡೆ ಮತಪಟ್ಟಿಯಲ್ಲಿರುವ ಹೆಸರು, ಡುಪ್ಲಿಕೇಟ್ ಮತದಾರರ ಹೆಸರು ಡಿಲೀಟ್ ಮಾಡಲಿ ಅದನ್ನು ಬಿಟ್ಟು ಎಲ್ಲಿಯೋ ಇರುವವರನ್ನು ಇಲ್ಲಿನ ಮತಪಟ್ಟಿಗೆ ಸೇರ್ಪಡೆ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹತಾಶೆಯಾಗಿದ್ದಾರೆ, ಪದೇ ಪದೇ ನಾ ಯಾರು ಎಂದು ಕೇಳುವ ಅವರು ಎಷ್ಟು ಮತಗಳ ಅಂತರದಿಂದ ಬಂದಿದ್ದಾರೆ ಎಂದು ನೋಡಿಕೊಳ್ಳಲಿ, ಅವರೇನೂ 30 ಸಾವಿರ ಮತಗಳ ಅಂತರದಿಂದ ಆಯ್ಕೆಯಾಗಿಲ್ಲ ಎಂದರು.

ಹಿರಿಯ ಮುಖಂಡ ಚಂದ್ರಶೇಖರ ಕೊಡಬಾಗಿ ಮಾತನಾಡಿದರು.

ವಿಡಿಎ ಅಧ್ಯಕ್ಷ ಡಾ.ಗಂಗಾಧರ ಸಂಬಣ್ಣಿ, ಅಪ್ಪು ಪೂಜಾರಿ, ವಸಂತ ಹೊನಮೋಡೆ, ಫಯಾಜ್ ಕಲಾದಗಿ ಮೊದಲಾದವರು ಪತ್ರಿಕಾ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026-27ನೇ ಸಾಲಿನ ಕೃಷಿ ಇಲಾಖೆಯ ಹೈಟೆಕ್ ಹಾರ್ವೆಸ್ಟರ್ ಹಬ್ ಕಾರ್ಯಕ್ರಮದಡಿ ಶುಗರ್‌ಕೇನ್ ಹಾರ್ವೆಸ್ಟರ್ ಹಬ್ ಹಾಗೂ ಕಂಬೈನ್ ಹಾರ್ವೆಸ್ಟರ್ ಹಬ್‌ಗಳನ್ನು ಸಹಾಯಧನದಡಿ ವಿತರಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ಸಾಮಾನ್ಯ ಹಾಗೂ ಪರಿಶಿಷ್ಟ ವರ್ಗದ ವೈಯಕ್ತಿಕ ಫಲಾನುಭವಿಗಳು ಹಾಗೂ ಸಂಘ- ಸಂಸ್ಥೆಗಳು ಶುಗರ್‌ಕೇನ್ ಹಾರ್ವೆಸ್ಟರ್ ಹಬ್ ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದ್ದು, ಸಾಮಾನ್ಯ ಹಾಗೂ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಕಂಬೈನ್ ಹಾರ್ವೆಸ್ಟರ್ ಹಬ್‌ಗಳ ಸಹಾಯಧನದಡಿ ನೀಡಲಾಗುತ್ತಿದ್ದು.

ಯಂತ್ರೋಪಕರಣಗಳ ಖರೀದಿಗೆ ಅನುದಾನ ಲಭ್ಯತೆ, ಆದ್ಯತೆಯ ಆಧಾರದ ಮೇಲೆ ಸಹಾಯಧನ ಮಂಜೂರು ಮಾಡಲಾಗುತ್ತಿದ್ದು .ಆಸಕ್ತ ರೈತರು, ರೈತ ಸಂಘಗಳು ಹಾಗೂ ಸಂಸ್ಥೆಗಳು ಕೊನೆಯ ದಿನಾಂಕ ಆಗಸ್ಟ್ 10 ರೊಳಗೆ ಅರ್ಹರು ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಬಹುದಾಗಿದೆ

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 7 ದಿನದೊಳಗೆ ಹೇಳಿಕೆ, ದಾಖಲೆ ಸಲ್ಲಿಸಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವ ವಿವಿಧ ಸಂಘಗಳಿಗೆ ನೋಟೀಸ್ ನೀಡಲಾಗುತ್ತಿದ್ದು, 7 ದಿನದೊಳಗಾಗಿ ಕಚೇರಿಗೆ ಖುದ್ದಾಗಿ ಹಾಜರಾಗಿ ಹೇಳಿಕೆ ಹಾಗೂ ದಾಖಲೆಗಳನ್ನು ಸಲ್ಲಿಸಬೇಕು. ಇಲ್ಲವಾದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಭಾವಿಸಿ ಸಂಘಗಳ ನೋಂದಣಿ ರದ್ದತಿಗಾಗಿ ಕ್ರಮ ಕೈಗೊಳ್ಳಲಾಗುವುದು. 7 ದಿನಗಳ ಮೇಲೆ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಸಹಕಾರಿ ಸಂಘಗಳ ಉಪನಿಬಂಧಕರು ತಿಳಿಸಿದ್ದಾರೆ.

ಮುದ್ರಣಾಲಯ ಸಹಕಾರ ಸಂಘ ನಿ, ವಿಜಯಪುರ, ವಿಜಾಪೂರ ಬ್ರಿಕ್ಸ್ ಮತ್ತು ಟಾಯಿಲ್ಸ್ ಕೂಲಿಕಾರರ ಸಹಕಾರ ಸಂಘ ನಿ, ವಿಜಯಪುರ. ಶ್ರೀ ಸಿದ್ದೇಶ್ವರ ಮಹಿಳಾ ವಿವಿದೋದ್ದೇಶಗಳ ಸಹಕಾರ ನಿ..ವಿಜಯಪುರ ಹಾಗೂ ಮಹಿಳಾ ವಿವಿದೋದ್ದೇಶಗಳ ವಿಜಯಪುರ. ಈ ಸಂಘಗಳು ಸಹಕಾರ ವರ್ಷದಿಂದ ಸ್ಥಗಿತಗೊಂಡಿದ್ದು, ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವುದು ಗಮನಕ್ಕೆ ಬಂದಿದೆ.

ಈ ಸಂಘಗಳಿಗೆ ಅಂತಿಮ ಅವಕಾಶವಿದ್ದು, ಸಮಾಪನೆಗೊಂಡ ಸಹಕಾರ ಸಂಘಗಳ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72(2)ರ ಮೇರೆಗೆ ಮೇಲಿನ ಸಂಘದ ಸದಸ್ಯ-ರಿಗೆ ಹಾಗೂ ಆಡಳಿತ ಮಂಡಳಿಯವರು ಈ ಪ್ರಕಟಣೆಯನ್ನೇ ನೋಟೀಸ್ ಎಂದು ಪರಿಗಣಿಸಲು ಸಹಕಾರ ಸಂಘಗಳ ಉಪ ನಿಬಂಧಕರ ಪ್ರಕಟಣೆ ತಿಳಿಸಿದೆ.




## ನೀಟ್ & ಇತರ ಪರೀಕ್ಷೆಗಳ ಅವ್ಯವಸ್ಥೆ ಖಂಡಿಸಿ ಡಿಎಸ್ಸೆಸ್ ಮನವಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಡಾ.ಡಿ.ಜಿ.ಸಾಗರ ಬಣ) ಜಿಲ್ಲಾ ಸಮಿತಿ ವಿಜಯಪುರ ವತಿಯಿಂದ ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ದೇಶದ ಇನ್ನಿತರ ಪರೀಕ್ಷೆಗಳ ಅವ್ಯವಸ್ಥೆಯನ್ನು ಖಂಡಿಸಿ ಹಾಗೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ರಾಜಿನಾಮೆ ನೀಡಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿ ಡಾ.ಆನಂದ ಅವರ ಮುಖಾಂತರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿದ್ದು ರಾಯಣ್ಣನವರ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆಗಳು ವ್ಯವಸ್ಥೆಯನ್ನು ಸುಧಾರಿಸುವ ಅವಕಾಶಗಳು ಆಗಿರುತವೆ. ಸರಕಾರಗಳು ಜನರ ಅಸಮಾಧನವನ್ನು ಆಲಿಸುವ ಸಾಮರ್ಥ್ಯ ಹೊಂದಿದಾಗ ಮಾತ್ರ ಅವು ಬಲಿಷ್ಠವಾಗುತ್ತದೆ. ದೇಶದ ಯುವ ಜನತೆ ಭವಿಷ್ಯಕ್ಕೆ ಧಕ್ಕೆ ತರುತ್ತಿರುವ ದೇಶದ ಪರೀಕ್ಷೆಗಳ ಅವ್ಯವಸ್ಥೆಯನ್ನು ಸರಿಪಡಿಸಬೇಕು. ಜೀವ ಕಳೆದುಕೊಂಡ ವಿದ್ಯಾರ್ಥಿಗಳ ಕುಟುಂಬಕ್ಕೆ ಪರಿಹಾರ ಕೂಡಲೇ ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಮುಖಂಡರಾದ ರಮೇಶ ದರಣಾಕರ, ಮಹಾಂತೇಶ ಸಾಸಬಾಳ, ವಿಶ್ವನಾಥ ದೊಡಮನಿ, ದೊಂಡಪ್ಪ ನಾಟೀಕಾರ, ಶಂಕರ ಚಲವಾದಿ, ರಾಜು ಕಟ್ಟಿಮನಿ, ಚೈತನ ಸಿಂದಗಿ, ಆಸೀಫ್ ಪಟೇಲ, ಪ್ರೇಮ ಚಲವಾದಿ, ವಿಜು ಕವಲಗಿ, ಆಕಾಶ್ ಹಿಪ್ಪರಗಿ, ಶುಭಾಷ ಚಂದ್ರಶೇಖರ ಮಲ್ಕಣವರ ಮತ್ತಿತರರು ಉಪಸ್ಥಿತರಿದ್ದರು.

# ಗ್ಲೋಬಲ್ ಸಿಎಸ್‌ಆರ್ ಮತ್ತು ಸಸ್ಟೇನಬಿಲಿಟಿ ಸಮ್ಮಿಟ್2026 ಉದ್ದೇಶಿಸಿಸಿಎಂ ಡಿ ಕೆ ಶಿವಕುಮಾರ್ ಘೋಷಣೆ

## ಸಿಎಸ್ಸಾರ್ ಯೋಜನೆಗಳ ಮೇಲ್ವಿಚಾರಣೆಗೆ ವಿಶೇಷ ತಂಡ ರಚನೆ

ಬೆಂಗಳೂರು: ಕೈಗಾರಿಕೆಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಅಖಖ) ನಿಧಿಯನ್ನು ಪ್ರಾಥ-ಮಿಕ ಶಿಕ್ಷಣ ಬಲಪಡಿಸುವತ್ತ ಕೇಂದ್ರೀಕರಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರೆ ನೀಡಿದರು.

ರಾಜ್ಯಾದ್ಯಂತ ನಡೆಯುತ್ತಿರುವ ಸಿಎಸ್‌ಆರ್ ಯೋಜನೆಗಳ ಮೇಲ್ವಿಚಾರಣೆಗಾಗಿ ಸರ್ಕಾರ ವಿಶೇಷ ತಂಡವನ್ನು ರಚಿಸುವುದಾಗಿ ಅವರು ಘೋಷಿಸಿದರು.

ನಗರದಲ್ಲಿ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘ (ಈಏಅಅಖ) ಆಯೋಜಿಸಿದ್ದ ಗ್ಲೋಬಲ್ ಸಿಎಸ್‌ಆರ್ ಮತ್ತು ಸಸ್ಟೇನಬಿಲಿಟಿ ಸಮ್ಮಿಟ್2026 ನ್ನು ಉದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕದ ಅಭಿವೃದ್ಧಿಗೆ ಎಫ್‌ಕೆಸಿಸಿಐ ನೀಡಿರುವ ಕೊಡುಗೆಯನ್ನು ಶ್ಲಾಘಿಸಿದರು.

ಎಫ್‌ಕೆಸಿಸಿಐಯನ್ನು ಅಭಿನಂದಿಸಿದ ಮುಖ್ಯಮಂತ್ರಿ, ಒಟ್ಟಿಗೆ ಸೇರುವುದು ಆರಂಭ, ಒಟ್ಟಿಗೆ ಚರ್ಚಿಸುವುದು ಪ್ರಗತಿ, ಒಟ್ಟಿಗೆ ಕೆಲಸ ಮಾಡುವುದು ಯಶಸ್ಸು ಎಂದು ಹೇಳಿದರು.

ಸಿಎಸ್‌ಆರ್ ಪರಿಕಲ್ಪನೆಯನ್ನು ಜಾರಿಗೆ ತಂದ ಶ್ರೇಯಸ್ಸು ಮಾಜಿ ಕೇಂದ್ರ ಹಣಕಾಸು ಸಚಿವ ಪ್ರಣಬ್ ಮುಖರ್ಜಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದ ಅವರು, ಸಿಎಸ್‌ಆರ್ ದಾನವಲ್ಲ, ಸುಸ್ಥಿರ ಅಭಿವೃದ್ಧಿಗೆ ಮಾಡುವ ಹೂಡಿಕೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಬೆಂಗಳೂರು ಮಾತ್ರವಲ್ಲದೆ ರಾಜ್ಯದ ಇತರ ಭಾಗಗಳ ಅಭಿವೃದ್ಧಿಗೂ ಸಮಾನ ಆದ್ಯತೆ ನೀಡಬೇಕಾಗಿದೆ ಎಂದು ಹೇಳಿದ ಮುಖ್ಯಮಂತ್ರಿ, ರಾಜ್ಯದಲ್ಲಿ ಪ್ರಸ್ತುತ ಸುಮಾರು 10 ಸಾವಿರ ಸಿಎಸ್‌ಆರ್ ಯೋಜನೆಗಳು ನಡೆಯುತ್ತಿವೆ. ಅವುಗಳ ಮೇಲ್ವಿಚಾರಣೆಗಾಗಿ ಮೈಸೂರು, ಹುಬ್ಬಳ್ಳಿ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುವ ವಿಶೇಷ ಸರ್ಕಾರಿ ತಂಡವನ್ನು ರಚಿಸಲಾಗುವುದು ಎಂದು ಘೋಷಿಸಿದರು.

ಗ್ರಾಮೀಣ ಶಿಕ್ಷಣದತ್ತ ಹೆಚ್ಚು ಗಮನ ಹರಿಸುವಂತೆ ಕೈಗಾರಿಕೆಗಳಿಗೆ ಮನವಿ ಮಾಡಿದ ಅವರು, ಉತ್ತಮ ಶಿಕ್ಷಣ-ಕ್ಕಾಗಿ ವಿದ್ಯಾರ್ಥಿಗಳು ಬೆಂಗಳೂರಿಗೆ ವಲಸೆ ಬರಬೇಕಾದ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದರು.

ನಿಮ್ಮಮೊದಲಆದ್ಯತೆಪ್ರಾಥಮಿಕಶಿಕ್ಷಣವಾಗಿರಬೇಕು. ಶಾಲೆಗಳನ್ನು ದತ್ತು ಪಡೆದು ಮೂಲಸೌಕರ್ಯ ನಿರ್ಮಿಸಿ. ಟೊಯೋಟಾ ಸೇರಿದಂತೆ ಕೆಲವು ಕಂಪನಿಗಳು ಈಗಾಗಲೇ ಶಾಲೆಗಳನ್ನು ನಿರ್ಮಿಸುತ್ತಿವೆ. ಇನ್ನೂ ಹೆಚ್ಚಿನ ಕೈಗಾರಿಕೆಗಳು ಈ ಮಾದರಿಯನ್ನು ಅನುಸರಿಸಬೇಕು ಎಂದು ಕರೆ ನೀಡಿದರು.




### ವಿದೇಶಗಳಿಗೆ ತೆರಳುತ್ತಿರುವ ಬಹುಪಾಲು ಪ್ರತಿಭೆಗಳು

ರಾಜ್ಯದಲ್ಲಿ 71 ವೈದ್ಯಕೀಯ ಕಾಲೇಜುಗಳಿದ್ದು, ಪ್ರತಿ ವರ್ಷ ಸುಮಾರು 13,900 ವೈದ್ಯರು ಹಾಗೂ ಸುಮಾರು 1 ಲಕ್ಷ ಇತರ ವೈದ್ಯಕೀಯ ವೃತ್ತಿಪರರು ಹೊರಬರುತ್ತಿದ್ದಾರೆ. ಆದರೆ ಈ ಪ್ರತಿಭೆಯ ಬಹುಪಾಲು ವಿದೇಶಗಳಿಗೆ ತೆರಳುತ್ತಿದೆ ಎಂದು ಸಿಎಂ ಶಿವಕುಮಾರ್ ಅವರು ವಿಷಾದ ವ್ಯಕ್ತಪಡಿಸಿದರು.

"ಬೆಂಗಳೂರು ಇಂದು ಜಾಗತಿಕ ನಾಯಕರ ಗಮನ ಸೆಳೆಯುತ್ತಿರುವುದಕ್ಕೆ ದೂರದೃಷ್ಟಿಯ ನಾಯಕರ ಭದ್ರ ಅಡಿಪಾಯ ಮತ್ತು ಉತ್ತಮ ಶಿಕ್ಷಣ ವ್ಯವಸ್ಥೆಯೇ ಕಾರಣ. ದೇಶದ 140 ಅಂತಾರಾಷ್ಟ್ರೀಯ ಶಾಲೆಗಳಲ್ಲಿ ಸುಮಾರು 38 ಶಾಲೆಗಳು ಕರ್ನಾಟಕದಲ್ಲಿವೆ."



■ ಡಿ.ಕೆ.ಶಿವಕುಮಾರ್
ಮುಖ್ಯಮಂತ್ರಿ

ಕೇವಲ ಮೂಲಸೌಕರ್ಯ ನಿರ್ಮಾಣಕ್ಕೆ ಹಣ ನೀಡುವುದಷ್ಟೇ ಅಲ್ಲದೆ, ಶಿಕ್ಷಣ ಕ್ಷೇತ್ರಕ್ಕೆ ಪರಿಣಿತ ಸಿಬ್ಬಂದಿಯನ್ನೂ ಒದಗಿಸಬೇಕು ಎಂದು ಅವರು ಸಲಹೆ ನೀಡಿದರು.

ಪ್ರತಿಯೊಬ್ಬ ಮಗು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವ ಸಾಮರ್ಥ್ಯ ಹೊಂದಿರಬೇಕು. ಅದಕ್ಕಾಗಿಯೇ ನಾವು ವಿವಿಧ ನೀತಿಗಳನ್ನು ಜಾರಿಗೆ ತಂದಿದ್ದೇವೆ ಎಂದು ಹೇಳಿದರು.

ಬಲಿಷ್ಠ ಕೈಗಾರಿಕಾ ವಲಯವೇ ಬಲಿಷ್ಠ ಕರ್ನಾಟಕ ನಿರ್ಮಾಣಕ್ಕೆ ಕಾರಣವಾಗಲಿದೆ ಎಂದು ಪುನರುಚ್ಚ-ರಿಸಿದ ಮುಖ್ಯಮಂತ್ರಿ, ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನಗಳು ಸಮಾಜವನ್ನು ವೇಗವಾಗಿ ಬದಲಾಯಿಸುತ್ತಿರುವ ಈ ಸಂದರ್ಭದಲ್ಲಿ ಸರ್ಕಾರದ ತಕ್ಷಣದ ಆದ್ಯತೆ ಪ್ರಾಥಮಿಕ ಶಿಕ್ಷಣ ಮತ್ತು ಸುಸ್ಥಿರ ಅಭಿವೃದ್ಧಿ ಆಗಿರಬೇಕು ಎಂದರು.

ಪ್ರತಿಭಾವಂತ ಮಾನವ ಸಂಪನ್ಮೂಲ, ಆಹ್ಲಾದಕರ ಹವಾಮಾನ ಹಾಗೂ ಸಂಸ್ಕೃತಿಯ ಕಾರಣದಿಂದ ವಿಶ್ವದ ವಿವಿಧ ಭಾಗಗಳಿಂದ ಜನರು ಬೆಂಗಳೂರಿಗೆ ಬರುತ್ತಿದ್ದಾರೆ ಎಂದು ಹೇಳಿದ ಅವರು, ಗಾರ್ಡನ್ ಸಿಟಿ ಎಂಬ ಗುರುತನ್ನು ನಗರ ಮೀರಿದ್ದರೂ, ಮುಂಬೈ ಸೇ-ರಿದಂತೆ ಹಲವಾರು ಮಹಾನಗರಗಳಿಗೆ ಹೋಲಿಸಿದರೆ ಬೆಂಗಳೂರು ಇನ್ನೂ ಹೆಚ್ಚು ಕೈಗೆಟುಕುವ ನಗರವಾಗಿದೆ ಎಂದು ಅಭಿಪ್ರಾಯಪಟ್ಟರು.

## ಜು.24 ರಂದು ವಿವಿಧ ಗ್ರಾಮಗಳಲ್ಲಿ ಪಿಂಚಣಿ ಅದಾಲತ್

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಸಾಮಾಜಿಕ ಭದ್ರತಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಹಾಗೂ ಅರ್ಹ ಫಲಾನುಭವಿಗಳ ಅಹವಾಲುಗಳನ್ನು ಆಲಿಸಲು ಜಿಲ್ಲಾಡಳಿತ ಜುಲೈ 24 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲೆಯ ವಿವಿಧ 15 ಗ್ರಾಮಗಳಲ್ಲಿ 'ಪಿಂಚಣಿ ಅದಾಲತ್' ನಡೆಸಲು ನಿರ್ಧರಿಸಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ತಿಳಿಸಿದ್ದಾರೆ.

ಕಂದಾಯ ಇಲಾಖೆ ಹಾಗೂ ಸಾಮಾಜಿ-ಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದ ಸುತ್ತೋಲೆಯನ್ವಯ ಈ ಅದಾಲತ್ ಗಳನ್ನು ಆಯೋಜಿಸಲಾಗುತ್ತಿದ್ದು, ಉಪ ವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರು ಕಾರ್ಯಕ್ರಮದ ನೇತೃತ್ವ ವಹಿಸಲಿದ್ದಾರೆ.

ಪಿಂಚಣಿ ಅದಾಲತ್ ನಡೆಯುವ ಸ್ಥಳಗಳ ವಿವರ: ಮುದ್ದೇಬಿಹಾಳ ತಾಲೂಕಿನ ಚೊಂಡಿ ಗ್ರಾಮದ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ ಬೆಳಗ್ಗೆ 11 ಗಂಟೆಗೆ, ದೇವರಹಿಪ್ಪರಗಿ ತಾಲೂಕಿನ ಕೆಸರಟ್ಟಿ ತಾಂಡಾ ಸೇವಾಲಾಲ್ ದೇವಸ್ಥಾನದಲ್ಲಿ ಬೆಳಗ್ಗೆ 11 ಗಂಟೆಗೆ. ವಿಜಯಪುರ ನಗರದ ಶಾಪೇಟಿ ಗಲ್ಲಿಯ ಶ್ರೀ ಮಹಾದೇವಪ್ಪನ ದೇವಸ್ಥಾನದಲ್ಲಿ ಬೆಳಗ್ಗೆ 11 ಗಂಟೆಗೆ, ಲೋಹಗಾಂವ ಗ್ರಾಮದ ಸಮುದಾಯ ಭವನದಲ್ಲಿ ಬೆಳಗ್ಗೆ 11 ಗಂಟೆಗೆ, ಬಬಲೇಶ್ವರ ಪಟ್ಟಣ ಪಂಚಾಯಿತಿಯಲ್ಲಿ ಬೆಳಗ್ಗೆ 11 ಗಂಟೆಗೆ, ಮುಳ್ಳಾಳದ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ 11 ಗಂಟೆಗೆ, ನಿಡಗುಂದಿ ತಾಲೂಕಿನ ಹುಣಶ್ಯಾಳ ಪಿಸಿ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ 11 ಗಂಟೆಗೆ, ಚೀರಲದಿನ್ನಿಯ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ 11 ಗಂಟೆಗೆ, ಮುದ್ದೇಬಿಹಾಳ ತಾಲೂಕಿನ ಹಂಡರಗಲ್ಲು ಗ್ರಾಮದ ಗ್ರಾಮ ಚಾವಡಿಯಲ್ಲಿ ಬೆಳಗ್ಗೆ 11 ಗಂಟೆಗೆ, ತಾಳಿಕೋಟೆ ಪಟ್ಟಣದ ಬಸ್ತಿ ಓಣಿ ಮಸೀದಿಯಲ್ಲಿ ಬೆಳಗ್ಗೆ 11 ಗಂಟೆಗೆ, ಇಂಡಿಯ ನೆಹರು ನಗರದ ಶ್ರೀ ಸೇವಾಲಾಲ್ ದೇವಸ್ಥಾನದಲ್ಲಿ ಬೆಳಗ್ಗೆ 11 ಗಂಟೆಗೆ, ಚಡಚಣ ತಾಲೂಕಿನ ಸಂಖ ಗ್ರಾಮದ ಶ್ರೀ ಲಾಯಗಂಗಾ ದೇವಸ್ಥಾನದಲ್ಲಿ ಬೆಳಗ್ಗೆ 11 ಗಂಟೆಗೆ, ಸಿಂದಗಿ ಪಟ್ಟಣದ ವಾರ್ಡ್ ನಂ. 6 ರ ಸರಕಾರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಬೆಳಿಗ್ಗೆ 11ಗಂಟೆಗೆ, ವರ್ಕಾನಳ್ಳಿಯ ಸರಕಾರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಬೆಳಿಗ್ಗೆ 11 ಗಂಟೆಗೆ, ಬಸವನಬಾಗೇವಾಡಿ ತಾಲೂಕಿನ ಮುತ್ತಗಿಯ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ ಬೆಳಗ್ಗೆ 11 ಗಂಟೆಗೆ ಹಾಗೂ ಸಿಂದಗಿ ತಾಲೂಕಿನ ಕಕ್ಕಳಮೇಲಿ ಸರಕಾರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಬೆಳಗ್ಗೆ 11 ಗಂಟೆಗೆ ಪಿಂಚಣಿ ಅದಾಲತ್ ನಡೆಯಲಿದೆ. ಈ ಎಲ್ಲ ಅದಾಲತ್ ಗಳಲ್ಲಿ ಆಯಾ ವಿಭಾಗದ ಉಪವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರ್ ಗಳು ಭಾಗವಹಿಸಿದ್ದಾರೆ.

ಸಾಮಾಜಿಕ ಭದ್ರತಾ ಯೋಜನೆಯಡಿ ವಿವಿಧ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಇನ್ನು ಮುಂದೆ ನೇರ ಹಣ ವರ್ಗಾವಣೆ ಮೂಲಕ ಪಿಂಚಣಿ ಪಾವತಿಸಲು ಸರಕಾರ ತೀರ್ಮಾನಿಸಿದೆ. ಹಾಗಾಗಿ ಈ ಕಾರ್ಯವನ್ನು ಸಂಬಂಧಿಸಿದ ಬ್ಯಾಂಕ್, ಅಂಚೆ ಕಚೇರಿ ಅಧಿಕಾರಿಗಳ ಸಹಯೋಗದೊಂದಿಗೆ ಮಾಡಿಸಲು ಸೂಚಿಸಲಾಗಿದೆ.

ಸಾರ್ವಜನಿಕರು ಹಾಗೂ ಪಿಂಚಣಿ ಸಂಬಂಧಿತ ಸಮಸ್ಯೆ ಎದುರಿಸುತ್ತಿರುವ ಫಲಾನುಭವಿಗಳು ನಿಗದಿತ ಸಮಯದಲ್ಲಿ ನಿಗದಿತ ಸ್ಥಳಗಳಿಗೆ ತೆರಳಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೂಲಸೌಕರ್ಯ ಒದಗಿಸಲು ಆಗ್ರಹಿಸಿ ಕರವೇ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ಇಲ್ಲಿನ ಗ್ರಾಮ ಪಂಚಾಯತಿ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಹದಗೆಟ್ಟಿರುವ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ನಿಡಗುಂದಿ ತಾಲ್ಲೂಕು ಘಟಕದ ಪದಾಧಿಕಾರಿಗಳು ಗುರುವಾರ ಇಲ್ಲಿನ ಗ್ರಾಮ ಪಂಚಾಯಿತಿ ಎದುರು ಪ್ರತಿಭಟಿಸಿದರು. ಕರವೇ ನಿಡಗುಂದಿ ತಾಲ್ಲೂಕು ಘಟಕದ ಅಧ್ಯಕ್ಷ ಆನಂದ ಹಡಗಲಿ ಮಾತನಾಡಿ,

ಆಲಮಟ್ಟಿ ಗ್ರಾಮ ಪಂಚಾಯಿತಿಯ ಎಲ್ಲಾ ವಾರ್ಡ್‌ಗಳಲ್ಲಿ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಮುಳ್ಳಿನ ಕಂಟಿಗಳು ಬೆಳೆದಿವೆ. ರಸ್ತೆಯ ತುಂಬಾ ತಗ್ಗುಗಳು ಬಿದ್ದು ನೀರು ನಿಲ್ಲುತ್ತಿರುವುದರಿಂದ ಸೊಳ್ಳೆಗಳ ಉತ್ಪತ್ತಿಯಾಗಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಈಗಾಗಲೇ ವಾರ್ಡ್ ನಂ. 03ರಲ್ಲಿ ತಗ್ಗು-ಗುಂಡಿಗಳಿಂದಾಗಿ ಎರಡು ಬೈಕ್ ಅಪಘಾತಗಳು ಸಂಭವಿಸಿದ್ದು, ರಸ್ತೆಗಳು ಮೃತ್ಯುಕೂಪಗಳಾಗಿ ಪರಿವರ್ತನೆಯಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಹಲವು ದಿನಗಳಿಂದ ಗ್ರಾಮದಲ್ಲಿ ಕಸದ ವಾಹನ ಬಾರದ ಹಿನ್ನೆಲೆಯಲ್ಲಿ ಸಾರ್ವಜನಿಕರು ಎಲ್ಲೆಂದರಲ್ಲಿ ಕಸ ಬಿಸಾಡುವಂತಾಗಿದೆ. ತಕ್ಷಣವೇ ರಸ್ತೆಗೆ ಮಣ್ಣು ಅಥವಾ ಮರಳು ಹಾಕಿ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು, ಮುಳ್ಳಿನ ಕಂಟಿಗಳನ್ನು ತೆರವುಗೊಳಿಸಬೇಕು ಹಾಗೂ ಪ್ರತಿದಿನ ಕಸದ ವಾಹನ ಬರುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಯಿತು.



ಮನವಿ ಪತ್ರ ಸ್ವೀಕರಿಸಿದ ಆಲಮಟ್ಟಿ ಪಿಡಿಓ ಲಿಖಿತ ಭರವಸೆ ನೀಡಿದ ಬಳಿಕ ಪ್ರತಿಭಟನೆ ಅಂತ್ಯಗೊಂಡಿತು.



# ಕೆಬಿಎನ್ ಆಸ್ಪತ್ರೆಯಲ್ಲಿ ಇಎನ್ ಟಿ ಕಾರ್ಯಾಗಾರ

ಕಲಬುರಗಿ: ನಗರದ ಸುಪ್ರಸಿದ್ಧ ಕೆಬಿ-ಎನ್ ಆಸ್ಪತ್ರೆಯ ಇಎನ್ ಟಿ ದಂತ ವಿಭಾಗದಲ್ಲಿ ಡಿಮಿಸ್ಟಿಫೈಯಿಂಗ್ ಅಲರ್ಜಿಕ್ ರೈಟಿಸ್ ಕಾರ್ಯಾಗಾರವನ್ನು ರವಿವಾರ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಯಾಗಿ ಆಗಮಿಸಿದ ಮೆಡಿಕಲ್ ಡೀನ್ ಡಾ. ಗುರುಪ್ರಸಾದ ಅವರು, ಕಾರ್ಯಕ್ರಮಕ್ಕೆ ಚಾಲನೆ ನೀಡ ಮಾತನಾಡುತ್ತ, ಕೆಬಿಎನ್ ಆಸ್ಪತ್ರೆ ನೂತನ ನವನವೀನ ಕೌಶಲ್ಯ ಅಳವಡಿಸಿಕೊಳ್ಳುತ್ತದೆ. ಕೆಬಿಎನ್ ಆಸ್ಪತ್ರೆ ಯಾವಾಗಲೂ ಬಡವರ ಸೇವೆಗೆ ಸಿದ್ದವಾಗಿದ್ದು ಅದರಲ್ಲೂ ಇಎನ್ ಟಿ ವಿಭಾಗ ಸದಾ ಒಂದು ಹೆಜ್ಜೆ ಮುಂದಿದೆ ಎಂದರು.

ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಸಿದ್ದಲಿಂಗ ಚೆಂಗಟಿ ಮಾತನಾಡಿ, ಇಎನ್ ಟಿ ವಿಭಾಗ ಸದಾ ಕ್ರಿಯಾಶೀಲವಾಗಿರುತ್ತದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕಾರ್ಯ ಮಾಡಲಿ ಎಂದು ಹಾರೈಸಿದರು.

ಬೆಂಗಳೂರು ಮಣಿಪಾಲ್ ಆಸ್ಪತ್ರೆಯ ಡಾ. ಗಾಯತ್ರಿ ಎಸ್ ಪಂಡಿತ್, ಬೆಂಗಳೂರು ಮೆಡಿಕೇರಿ ಇಎಸ್‌ಟಿ ಸೂಪರ್ ಸ್ಪೆಷಾಲಿಟಿ ಕೇಂದ್ರದ ಡಾ.ಶ್ರುತಿ ಮಂಜುನಾಥ್, ಡಾ.ಶ್ರದ್ಧಾ ಪವಾರ್( ವೆಲ್ಲೂರು) ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿವಿವಿಧ ವಿಷಯಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಾಗಾರದಲ್ಲಿ ಸುಮಾರು 180 ವಿದ್ಯಾರ್ಥಿಗಳು ನೋಂದಣಿ ಮಾಡಿದ್ದು, ಕಾರ್ಯಕ್ರಮದಲ್ಲಿ ಆಸ್ಪತ್ರೆ ಆಡಳಿತ ಅಧಿಕಾರಿ ಡಾ ರಾಧಿಕಾ, ಬಸವೇಶ್ವರ ಆಸ್ಪತ್ರೆಯ ಮೆಡಿಕಲ್ ಸೂಪೇರಿಟೆಂಡೆಂಟ್ ಡಾ ಮಲ್ಲಿಕಾರ್ಜುನ, ಈ ಎಸ್ ಐ ಆಸ್ಪತ್ರೆಯ ಈ ಎನ್ ಟಿ ಮುಖಸ್ತ ಡಾ ಅನಿಲ್ ದೊಡಮನಿ, ಜಿಮ್ಸ್ ಆಸ್ಪತ್ರೆಯ ಡಾ ರೇಣುಕಾ, ವಿಭಾಗದ ಮುಖ್ಯಸ್ತ ಡಾ ರಾಜೀವ್ ರೆಡ್ಡಿ,ಡಾ.ಸೈಯದ್ ಮುಷ್ತಾಕ, ಡಾ.ರಜನೀಶ್ ಕೆ, ಡಾ.ದೀಪಿಕಾ ಡಾ.ಶಾಫಿ ಮಝುರ, ಡಾ.ಭಾವನಾ ಡಾ.ಶೋಯಬ್ ಅಮೀರ, ಡಾ.ಆಯೇಷಾ ಸಿದ್ದಿಕಿ, ಡಾ.ವೈಷ್ಣವಿ ಡಾ.ಸಮೀರಾ, ಡಾ.ಪದ್ಮ, ಡಾ ಸಚಿನ್ ಶಾಹ, ಡಾ ಚಂದ್ರಕಲಾ, ಡಾ ಸಂಗೀತಾ, ಡಾ ಅಸ್ಮಾ, ಮುಂತಾದವರು ಹಾಜ-ರಿದ್ದರು. ಡಾ. ಫೈಜಾ ರಹಮತ್ ನಿರೂಪಿಸಿದರು. ಶ್ರುತಿ ಮತ್ತು ಮೆಹಮೂದ ಪ್ರಾರ್ಥಿಸಿದರು. ಡಾ.ಸಮೀರ ಸ್ವಾಗತಿಸಿದರು. ಡಾ ಆಯಿಷಾ ವಂದಿಸಿದರು.

# ಡಾ.ಮಲ್ಲಿಕಾರ್ಜುನ ಖರ್ಗೆ ಹುಟ್ಟು ಹಬ್ಬ: ರಾಘವೇಂದ್ರ ಮೈಲಾಪುರ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರಿಗೆ "ಕುಶಾಗ್ರಮತಿ ಖರ್ಗೆ" ಪ್ರಶಸ್ತಿ ಪ್ರಧಾನ



ಕಲಬುರಗಿ; ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ಆಶ್ರಯದಲ್ಲಿ ನಗರದ ಸುಪರ ಮಾರುಕಟ್ಟೆ ಕೆಕೆಸಿಸಿಐ ಯ ಶ್ರೀನಿವಾಸರಾವ ರಘೋಜಿ ಸಭಾಂಗಣದಲ್ಲಿ ನಿನ್ನೆ ಮಂಗಳವಾರ ಜು.21ರಂದು ಜರುಗಿದ ಕಾರ್ಯಕ್ರಮದಲ್ಲಿ ಉದ್ಯಮಿ ರಾಘವೇಂದ್ರ ಮೈಲಾಪುರ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರಿಗೆ "ಕುಶಾಗ್ರಮತಿ ಖರ್ಗೆ" ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕರ್ಮಯೋಗಿ ರಾಜ್ಯ ಸಭಾ ವಿರೋಧ ಪಕ್ಷದ ನಾಯಕರಾದ ಡಾ.ಮಲ್ಲಿಕಾರ್ಜುನ ಖರ್ಗೆ ಅವರ 85ನೇ ಹುಟ್ಟು ಹಬ್ಬದ ಸಂಭ್ರಮದ ಪ್ರಯುಕ್ತ ಆಯೋಜಿಸಲಾಗಿದ್ದ ಈ ಕಾರ್ಯಕ್ರಮಕ್ಕೆ ಪೂಜ್ಯ ಹವಾ ಮಲ್ಲಿನಾಥ ಮಹಾರಾಜರು ಚಾಲನೆ ನೀಡಿದರು. ಶ್ರೀಶರಣಬಸವೇಶ್ವರ ವಿದ್ಯಾವರ್ದಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಗುವಿವಿ ಕುಲಪತಿ ಪ್ರೊ.ಶಶಿಕಾಂತ ಎಸ್. ಉಡಿಕೇರಿ, ಶರಣಬಸಪ್ಪಾ ಪಪ್ಪಾ, ರಾಜು ದೇಶಮುಖ, ಲಕ್ಷ್ಮೀ ನಾರಾಯಣ ಮನೋಕರ್ ಭಾಗವಹಿಸಿದ್ದರು.

ವ್ಯಾಪಾರ ಮತ್ತು ಸಮಾಜ ಸೇವಾ ಕ್ಷೇತ್ರದಲ್ಲಿ ಕೈಗೊಂಡ ಗಣನಿಯ ಸಾಧನೆಗಾಗಿ ಹಿರಿಯ ಉದ್ಯಮಿ ರಾಘವೇಂದ್ರ ಮೈಲಾಪುರ ಮತ್ತು ವಿವಿಧ ಕ್ಷೇತ್ರಗಳ ಸಾಧಕರಾದ ಉಮಾಕಾಂತ ನಿಗ್ಗುಡಗಿ, ಡಾ.ಶಿವಪುತ್ರಪ್ಪ ಹರವಾಳ, ಪ್ರಭಾಕರ ಜೋಶಿ, ಹಿರಿಯ ಹೋರಾಟಗಾರ ಲಕ್ಷ್ಮಣ ದಸ್ತಿ, ಹಿರಿಯ ಪತ್ರಕರ್ತ ಹಟ್ಟಿ ನಜೀರ್ ಮಿಯಾನ್, ಡಾ.ಲಕ್ಷ್ಮೀ ಪಾಟೀಲ ಮಾಕಾ, ವೈಷ್ಣವಿ ಎಸ್.ಅಹಂಕಾರಿ, ಸರೇಖಾ ಹೊನಗುಂಟಾ, ಸೋಮಶೇಖರ ಬಣಗಾರ ಸೊನ್ನ, ದಯಾನಂದ ಮನೋಕರ್, ಶಿವು ಹಳ್ಳಿಖೇಡ ಅವರಿಗೆ ಕುಶಾಗ್ರಮತಿ ಖರ್ಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ಅಧ್ಯಕ್ಷರಾದ 'ಶಾಂತರೆಡ್ಡಿ ಪೇಠಶಿರೂರ ಅವರು, ಪ್ರಸ್ತಾವಿಕವಾಗಿ ಸಂಘದ ಉದ್ದೇಶ ಮತ್ತು ಕಳೆದ ಎರಡು ದಶಕಗಳಿಂದ ಕೈಗೊಳ್ಳುತ್ತಿರುವ ಕಾರ್ಯಕ್ರಮದ ಕುರಿತು ಮಾತನಾಡಿದರು.

ಹೋರಾಟಗಾರ ಲಕ್ಷ್ಮಣ ದಸ್ತಿ, ಉಮಾಕಾಂತ ನಿಗ್ಗುಡಗಿ, ಬಸವರಾಜ ದೇಶಮುಖ, ಶರಣು ಪಪ್ಪಾ ಮತ್ತು ಪ್ರೊ. ಶಶಿಕಾಂತ ಉಡಿಕೇರಿ ಅವರು, ಡಾ.ಮಲ್ಲಿಕಾರ್ಜುನ ಖರ್ಗೆ ಅವರು, ಈ ಭಾಗದ ಕಲ್ಯಾಣಕ್ಕಾಗಿ ಕೈಗೊಂಡ ಕೊಡುಗೆಗಳ ಕುರಿತು ಸವಿಸ್ತಾರವಾಗಿ ವಿವರಿಸಿದರು.

ಡಾ.ಖರ್ಗೆ ಅವರ ಜನಪರ ಕಾಳಜಿ, ದೂರದೃಷ್ಟಿಯಿಂದ ಕಲಂ 371 ಜೆ ಸಂವಿಧಾನಿಕ ಸೌಲಭ್ಯ ನಮ್ಮ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಸಿಗುವಂತಾಗಿದೆ. ಅವರ ಜನಸೇವೆಯನ್ನು ಸ್ಮರಿಸುವ ಈ ಕಾರ್ಯಕ್ರಮ ಸಂಘಟಿಸಿರುವುದು ಅರ್ಥ ಪೂರ್ಣವಾಗಿದ್ದು, ಖರ್ಗೆ ಅವರನ್ನು ಪಕ್ಷತೀಥ, ಜಾತಿ ಧರ್ಮ ರಹಿತವಾಗಿ ಈ ಭಾಗದ ಜನರು ಸ್ಮರಿಸುತ್ತಾರೆ. ಭಗವಂತನು ಅವರಿಗೆ ಆಯುರಾರೋಗ್ಯ ಅಧಿಕಾರ ಸಂಪತ್ತು ನೀಡಿ ಅವರ ಜನಸೇವೆ ಮತ್ತಷ್ಟು ಕಲ್ಯಾಣಕರ ವಾಗಿ ರಾಷ್ಟ್ರಕ್ಕೆ ವಿಸ್ತರಿಸಲೆ ಎಂದು ಗಣ್ಯಮಾನ್ಯರು ತಮ್ಮ ಅನಿಷಿಕೆಯಲ್ಲಿ ಶುಭಹಾರೈಸಿದರು.



# ಕೆಬಿಎನ್ ಆಸ್ಪತ್ರೆಯಲ್ಲಿ ಸಿಪಿಆರ್ ಜಾಗೃತಿ ಕಾರ್ಯಕ್ರಮ ಯಶಸ್ವಿ

ಕಲಬುರಗಿ: ಹೃದಯ-ಶ್ವಾಸಕೋಶ ಪುನಶ್ಚೇತನ ದಿನದ ಅಂಗವಾಗಿ ಸ್ಥಳೀಯ ಕೆಬಿಎನ್ ಆಸ್ಪತ್ರೆಯಲ್ಲಿ ಸಿಪಿಆರ್ ಜಾಗೃತಿ ದಿನಾಚರಣೆಯನ್ನು ಕೆಬಿಎನ್ ಆಸ್ಪತ್ರೆಯ ಚಿಕ್ಕ ಮಕ್ಕಳ ವಿಭಾಗ ಹಾಗೂ ಇಂಡಿಯನ್ ಅಕಾಡೆಮಿ ಒಫ್ ಪೇಡಿಯಾಟ್ರಿಕ್ಸ್ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಆಸ್ಪತ್ರೆಯ ಮೆಡಿಕಲ್ ಸೂಪೇರಿಟೆಂಡೆಂಟ್ ಡಾ. ಸಿದ್ಧಲಿಂಗ ಚೆಂಗಟಿ ಅವರು, ಮಾತನಾಡಿ ಸಿಪಿಆರ್ ಕುರಿತಾದ ಮಾಹಿತಿ ನೀಡಿದರು, ಯಾವಾಗ ಸಿಪಿಆರ್ ಬಳಸಬೇಕು, ಅದರ ಅವಶ್ಯಕ ಮತ್ತು ಭಾರತದಲ್ಲಿ ಸಿಪಿಆರ್ ಜಾಗ್ರತೆಯ ಬಗ್ಗೆ ಹೇಳುತ್ತಾ ಸಿಪಿಆರ್ ನ ತಂತ್ರಾಶಗಳನ್ನು ಸವಿಸ್ತಾರವಾಗಿ ವಿವರಿಸಿದರು.

ವಿಭಾಗದ ಪ್ರಾಧ್ಯಾಪಕರಾದ ಡಾ. ಚರಣ-ರಾಜ ಚೈಲ್ಡ್ ಸಿಪಿಆರ್ ಬಗ್ಗೆ ಉಪನ್ಯಾ ನೀಡಿದರು, ಮಗುವಿಗೆ ಸಿಪಿಆರ್ ಮಾಡಲು ಕನಿಷ್ಠ ಒಂದು ವರ್ಷ ವಯಸ್ಸು ಇರಬೇಕು ಎಂದರು. ವಿಭಾಗದ ಡಾ. ವಿಜಯ ಸಿಪಿಆರ್ ಚೋಕ್ಸಕುರಿತಾದ ಬಗ್ಗೆ ತಿಳಿ ಹೇಳಿದರು.ಮೆಡಿಕಲ್ ಡೀನ ಡಾ. ಗುರುಪ್ರಸಾದ ವಿಭಾಗಕ್ಕೆ ಅಭಿನಂದಿಸಿದರು. ಅಣುಕು ಪ್ರದರ್ಶನ ನೋಡಿ ಪಿಜಿ ಹಾಗೂ ಸಿಬ್ಬಂದಿಗಳ ಸಮಯ ಪ್ರಜ್ಞೆಯನ್ನು ಶ್ಲಾಘಸಿದರು. ವಿದ್ಯಾರ್ಥಿಗಳಿಗೆ ಡೆಮೋ ನೀಡಲಾಯಿತು. ಅಲ್ಲದೇ ಅವರಿಗೆ ಪ್ರಾಕ್ಟಿಸ್ ಮಾಡಿಸಲಾಯಿತು. ಕಾರ್ಯಕ್ರಮದಲ್ಲಿ, ಮೆಡಿಸಿನ್ ವಿಭಾಗದ ಹೊರ ರೋಗಿಯ ತುರ್ತು ಪರಿಸ್ಥಿತಿಯಲ್ಲಿ ಸೀನಿಯರ ಪಿಜಿ ಸ್ಟ್ರೇಚೆರ್ ನಲ್ಲಿಯೇ ಸಿಪಿಆರ್ ಮಾಡುತ್ತ ಆಸ್ಪತ್ರೆಯ ಸಿಬ್ಬಂದಿ ಅವರನ್ನು ಚಿಕಿತ್ಸೆಗೆ ಕರೆದುಕೊಂಡ ಹೋದ ಸಿಸಿಟಿವಿ ವಿಡಿಯೋ ತುಣುಕನ್ನು ತೋರಿಸಿ ವಿದ್ಯಾರ್ಥಿಗಳಿಗೆ ಸಿಪಿಆರ್ ಮಹತ್ವ ವಿವರಿಸಿದರು.

ವಿಭಾಗದ ಮುಖ್ಯಸ್ಥ ಡಾ. ವಿನೋದ ಉಪಳಾಂವ್ಕರ ಕಾರ್ಯಕ್ರಮವನ್ನು ನಿರೂಪಿಸಿದರು. ಆಡಳಿತ ಅಧಿಕಾರಿ ಡಾ. ರಾಧಿಕಾ, ಡಾ. ರಾಜು ಮಾಲಿ ಹಾಗೂ ಎಲ್ಲ ವಿದ್ಯಾರ್ಥಿಗಳು ಹಾಜರಿದ್ದರು.

# ಸಿಯುಕೆಯ ಪ್ರಾಧ್ಯಾಪಕ ಡಾ.ರಾಘವೇಂದ್ರ ಬೋನಾಳ ಅವರು ಡಿಜಿಟಲ್ ಗ್ರಂಥಾಲಯ ಯೋಜನಾ ಸಲಹೆಗಾರರಾಗಿ ನೇಮಕ



ಕಲಬುರಗಿ:ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ರಾಘವೇಂದ್ರ ಬೋನಾಳ ಅವರು ಮಹಾರಾಷ್ಟ್ರದ ಪುಣೆ

ಮೂಲದ ಕ್ಯಾಲಿಯೋನಿಕ್ಸ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆನ ಡಿಜಿಟಲ್ ಗ್ರಂಥಾಲಯ, ಜ್ಞಾನ ನಿರ್ವಹಣೆ ಮತ್ತು ಮಾಹಿತಿ ವಿಜ್ಞಾನದ ಯೋಜನಾ ಸಲಹೆಗಾರರಾಗಿ ಇತ್ತೀಚೆಗೆ ನೇಮಕಗೊಂಡಿದ್ದಾರೆ.

ವಿ.ವಿ.ಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗವು ಪ್ರಾರಂಭವಾದಾಗಿನಿಂದ ಇದು ಮೊದಲ ಪ್ರಮುಖ ಸಲಹಾ ಯೋಜನೆಯಾಗಿದೆ. ಈ ಯೋಜನೆಯು ಸುಮಾರು 25 ಲಕ್ಷ ಮೌಲ್ಯದ ಅಂತರರಾಷ್ಟ್ರೀಯ ಆಶೋರ್ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಯೋಜನೆಯನ್ನು ಒಳಗೊಂಡಿದೆ. ಈ ಸಲಹಾಯೋಜನೆಯು ನಮ್ಮ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಶೈಕ್ಷಣಿಕ, ಸಂಶೋಧನಾ ಪರಿಣಿತಿಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಗೆ ಲಭಿಸಿರುವುದು ಸಾಕ್ಷಿಯಾಗಿದೆ.

ಈ ಯೋಜನೆಯಡಿ ಡಾ. ಬೋನಾಳ ಅವರು ಡಿಜಿಟಲ್ ಗ್ರಂಥಾಲಯಗಳು, ಏಔಊಂ, ಆಖರಿಚಿಥಿಜ, ಖಈಖಆ ಆಧಾರಿತ ಗ್ರಂಥಾಲಯ ಸ್ವಯಂಚಾಲನೆ, ಜ್ಞಾನದ ನಿರ್ವಹಣಾ ವ್ಯವಸ್ಥೆಗಳ ಕು-ರಿತು ತಾಂತ್ರಿಕ ಸಲಹೆಗಳನ್ನು ಅವರು ನೀಡಲಿದ್ದಾರೆ, ಈಗಾಗಲೇ ಅವರು ಪೇಟೆಂಟ್ ಪಡೆದಿರುವ ಂಖ-ಚಾಲಿತ ಸಂವಾದಾತ್ಮಕ ಸ್ಮಾರ್ಟ್ ಪುಸ್ತಕ ತಂತ್ರಜ್ಞಾನದ ಬಳಕೆಯನ್ನೂ ಸಹ ಅನ್ವೇಷಣೆ ಮಾಡುತ್ತಿದ್ದಾರೆ.

ಸಿಯುಕೆ ಕುಲಪತಿಗಳಾದ ಪ್ರೊ. ಬಟ್ಟು ಸತ್ಯನಾರಾಯಣ ಅವರು ಈ ಶೈಕ್ಷಣಿಕ ಸಾಧನೆಗೆ ಡಾ.ಬೋನಾಳ ಅವರನ್ನು ಅಭಿನಂದಿಸಿದ್ದಾರೆ. ಈ ಶೈಕ್ಷಣಿಕ ಸಾಧನೆಯು ನಮ್ಮ ವಿ.ವಿ.ಯಲ್ಲಿ ಹೊಸ ನಾವೀನ್ಯತೆ, ಉದ್ಯಮ ಮತ್ತು ಶಿಕ್ಷಣ ಸಂಸ್ಥೆಗಳ ಸಹಯೋಗವಾಗಿದೆ, ಜೊತೆಗೆ ದೇಶದಲ್ಲಿ ಈಗಾಗಲೇ ಜಾರಿಯಲ್ಲಿರುವ ರಾಷ್ಟ್ರೀಯ ಶಿಕ್ಷಣ ನೀತಿಯ (ಓಇಕ) 2020 ಭಾಗವಾಗಿ ಹೊಸ ದೃಷ್ಟಿಕೋನದ ಬಗೆಗಿನ ಬದ್ಧತೆಯನ್ನು ಇದು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದ್ದಾರೆ.ಸಿಯುಕೆ ಕುಲಸಚಿವರಾದ ಪ್ರೊ. ಆರ್. ಆರ್. ಬಿರಾದಾರ್ ಅವರು ಸಹ ಡಾ.ಬೋನಾಳ ಅವರ ಸಾಧನೆಗೆ ಅಭಿನಂದಿಸಿದ್ದಾರೆ ಮತ್ತು ಇಂತಹ ಸಲಹಾ ಯೋಜನೆಗಳು ನಮ್ಮ ವಿಶ್ವವಿದ್ಯಾಲಯದ ಹೊಸ ಹೊಸ

ಅವಿಷ್ಕಾರ, ಸಂಶೋಧನಾ ಪ್ರಗತಿ ಮತ್ತು ನಾವೀನ್ಯತೆಗೆ ಜಾಗತಿಕ ವ್ಯಾಪ್ತಿಯನ್ನು ಬಲಪಡಿಸುತ್ತವೆ ಎಂದು ಅವರು ತಿಳಿಸಿದ್ದಾರೆ.

# ಶಿವಾ ಪಿಯು ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ



ಕಲಬುರಗಿ:ನಗರದ ಕೊಠಾರಿ ಭವನ ಎದುರುಗಡೆಯ ಗೋದುತಾಯಿ ಕಾಲೋನಿಯಲ್ಲಿರುವ ಶಿವಾ ಪಿಯು ಕಾಮರ್ಸ್ ಕಾಲೇಜಲ್ಲಿ ದ್ವಿತೀಯ ವರ್ಷದ ವಿದ್ಯಾರ್ಥಿಗಳು ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮವನ್ನು ಡಾ.ಎಸ್.ಎಸ್. ಹಂಚಿನಾಳ ರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಹೊನ್ನಕಿರಣ-ಗಿಯ ಕರಿಬಸವೇಶ್ವರ ಪ್ರೌಢಶಾಲೆ ಮುಖ್ಯಗುರು ಕಾಶಿನಾಥ ಅವರು ವಿದ್ಯಾರ್ಥಿಗಳಿಗೆ ಮುಂದೆ ಗುರಿ ಹಿಂದೆ ಗುರು ಇರಬೇಕು, ಏಕಲವ್ಯ ಇಲ್ಲದೆ ಇದ್ದರೆ ಇವತ್ತು ದ್ರೋಣಾಚಾರ್ಯರನ್ನು ನೆನೆಯುಹಾಗೆ ಇರುತ್ತಿರಲಿಲ್ಲ ಎಂದು ಹೇಳಿದರು. ವಿದ್ಯಾರ್ಥಿಗಳು ಒಳ್ಳೆಯ ಶಿಸ್ತು, ಸಮಯಪ್ರಜ್ಞೆ , ಸತತ ಪ್ರಯತ್ನ ಇದ್ದರೆ ಖಂಡಿತ ತಾವು ಯಾವುದೇ ಗು-ರಿಯನ್ನು ಮುಟ್ಟುತ್ತೀರಿ ಎಂದು ಸಲಹೆ ನೀಡಿದರು. ಇನ್ನೋರ್ವ ಅತಿಥಿಗಳಾಗಿ ಆಗಮಿಸಿದ ಬಸವರಾಜ್ ಸಜ್ಜನ ಅವರು ಮಾತಾಡಿ, ಈ ಕಾಲೇಜಿನಲ್ಲಿ ಒಳ್ಳೆಯ ಉಪನ್ಯಾಸಕರಿದ್ದು ಎಲ್ಲರಿಗೂ ಸಮಾನವಾಗಿ ನೋಡುವ ದೃಷ್ಟಿಕೋನ ವೈಯಕ್ತಿಕವಾದ ಕಾಳಜಿ ವಹಿಸುತ್ತಾರೆ ಶಿಕ್ಷಣದ ಜೊತೆಗೆ ಶಿಸ್ತನ್ನು ಕಲಿಸುವ ಒಂದು ಒಳ್ಳೆಯ ಮಹಾವಿದ್ಯಾಲಯ ಯಾಗಿದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಪ್ರಾಂಶುಪಾಲರಾದ ಅರುಣಕುಮಾರ ಅವರು ವಿದ್ಯಾರ್ಥಿಗಳ ಸರ್ವತೊಮುಖ ಬೆಳವಣಿಗೆಗೆ ನಾನು ಮತ್ತು ನಮ್ಮ ಉಪನ್ಯಾಸಕರು ಸೇರಿ ಮಾಡುತ್ತೇವೆ ಜೊತೆಗೆ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ನೀಡುವ ಮಹಾವಿದ್ಯಾಲಯ ಇದು ಆಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಂಪನ್ಮೂಲ ಶಿಕ್ಷಕ ರಾಜೇಶ, ಸಂಶೋಧನಾ ವಿದ್ಯಾರ್ಥಿ ಗಿರೀಶ, ಹಿಂಗುಲಾಂಬಿಕ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ರಮೇಶ ಯಾಳಗಿ, ಉಪನ್ಯಾಸಕರಾದ ಎ.ಕೆ. ರಾಠೋಡ, ಚನ್ನವೀರಯ್ಯ ಮಠ, ಐಶ್ವರ್ಯ ಗಿರೇಪ್ಪಗೋಳ, ಅಮರೇಶ್ ಹಾಳ್ವಿ, ಕುಮಾರಿ ಐಶ್ವರ್ಯ ಕುಲಕರ್ಣಿ, ವಿನೋದ ರಾಠೋಡ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ರಾಜ್ಯಕ್ಕೆ 12 ನೇ ರಾಂಕ್ ಆಗಿದ್ದ ಭರತ ಬಸವರಾಜ ಅವರಿಗೆ ಸನ್ಮಾನಿಸಲಾಯಿತು. ನಂತರ ವಿದ್ಯಾರ್ಥಿಗಳಿಂದ ಹಲವಾರು ಸಾಂಸ್ಕೃತಿ-ಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿ-ತ್ತು ಈ ಕಾರ್ಯಕ್ರಮವನ್ನು ಕುಮಾರ ಅಭಿಷೇಕ್ ಹಾಗೂ ಕುಮಾರಿ ಐಶ್ವರ್ಯ ನಿರೂಪಿಸಿದರು. ಕುಮಾರ ರಾಘವೇಂದ್ರ ಸ್ವಾಗತಿಸಿ ಕುಮಾರಿ ನಿಕಿತಾ ವಂದಿಸಿದರು

■ **ಉದಯರಶ್ಮಿ ದಿನಪತ್ರಿಕೆ**

# ವಂಶಪಾರಂಪರ್ಯಕ್ಕಿಂತ ವ್ಯಕ್ತಿತ್ವವೇ ಶ್ರೇಷ್ಟ

## ಭಾವರಶ್ಮಿ



'ರಾಜನ ಮಗ ರಾಜ' ಇದು ಮೊದಲಿನಿಂದಲೂ ನಡೆದು ಬಂದ ಘೋಷ ವಾಕ್ಯ. ಅದು ಒಂದು ರೀತಿಯಲ್ಲಿ ಸತ್ಯವೂ ಹೌದು. ಅದೆಷ್ಟೋ ರಾಜರ ಮಕ್ಕಳೇ ಮುಂದೆ ವಂಶಪಾರಂಪರ್ಯವಾಗಿ ಆಳ್ವಿಕೆ ನಡೆಸಿದ ಉದಾಹರಣೆಗಳೆಷ್ಟಿಲ್ಲ. ರಾಜ ಎಂಬ ಪದವಿ ಅವರಿಗೆ ಮಾತ್ರ ಸೀಮಿತವಾ, ಅವರದ್ದೇ ಸ್ವತ್ತಾ, ಅವರಿಗೆ ಮಾತ್ರ ಅಧಿಕಾರಕ್ಕೆ ಬರಲು ಆಸ್ಪದವಾ, ಹೀಗೆ ಹತ್ತು ಹಲವಾರು ಪ್ರಶ್ನೆಗಳು ವಿಚಾರಗಳನ್ನು ಪ್ರಸ್ತುತಕ್ಕೆ ಸಂಬಂಧಿಸಿ ಅವಲೋಕಿಸಿದಾಗ ಕಂಡುಬರುವ ಉತ್ತರ ಒಂದೇ 'ಖಂಡಿತ ಅಲ್ಲ'.

ಹಾಗಾದರೆ ಯಾವತ್ತೂ ರಾಜರ ಮಕ್ಕಳೇ ಆಳ್ವಿಕೆ ಅಧಿಕಾರವನ್ನು ನಡೆಸುವವರಾ, ಬೇರೆಯವರಿಗೆ ಅವಕಾಶ ಇಲ್ಲವಾ ಅನ್ನುವ ಮಾತಿಗೆ ಸಂಪೂರ್ಣವಾದ ಒಮ್ಮತದ ಉತ್ತರ ದೊರೆಯುವುದು ಕಷ್ಟಸಾಧ್ಯ. ಹಾಗಾದರೆ ಈ ಮಾತಿಗೆ ಉತ್ತರವಾಗಿ ನಮ್ಮಲ್ಲಿ ಅನೇಕ ದೃಷ್ಟಾಂತಗಳನ್ನು ಕಂಡಿದ್ದೇವೆ. ಇಲ್ಲಿ ರಾಜನ ಮಗನು ರಾಜನಾಗುವುದು ವಂಶಪರಂಪರೆಯಿಂದಾದರೆ, ಅವನ ಸಾಧನೆಯಿಂದಾದರೆ ಮಾತ್ರ ಅವನು ಜನಮಾನಸದಲ್ಲಿ ಅಮರವಾಗಿ ಉಳಿದು ಇತಿಹಾಸ ಸೃಷ್ಟಿಸುತ್ತಾನೆ ಹೊರತು ಕೇವಲ ರಾಜನ ಮಗನಾಗಿ ಅಲ್ಲವೆಂಬುದು ಸತ್ಯ.

ರಾಜಅಂದರೆಕೇವಲಸಿಂಹಾಸನವನ್ನೇರಿ ದರ್ಪ ತೋರಿ ಎಲ್ಲವನ್ನೂ, ಎಲ್ಲರನ್ನೂ ಸೂತ್ರಧಾರನಂತೆ ಕುಣಿಸುವುದಲ್ಲ. ಪ್ರಜೆಗಳನ್ನು ಮಕ್ಕಳಂತೆ ತಿಳಿದು ಅವರ ಒಳ್ಳೆಯದು ಕೆಟ್ಟದ್ದು ಯಾವುದೆಂದು ಅರಿತು ಸಮಾಜ ಉದ್ಧರಿಸಿವುದರೊಂದಿಗೆ ನಾಡು ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದಾಗಿದೆ.

**ಡಾ. ಅಬ್ದುಲ್ ಕಲಾಂ**

ಡಾ. ಅಬ್ದುಲ್ ಕಲಾಂ ರವರು ಹುಟ್ಟು ಬಡಕುಟುಂಬ ನೆನಪಿಟ್ಟುಕೊಳ್ಳುವಂತಹ ಮನೆತನವೇನಲ್ಲ, ಆದರೆ ಭಾರತದ ರಾಷ್ಟ್ರಪತಿ ಹಾಗೂ ಮಹಾನ್ ವಿಜ್ಞಾನಿಯಾಗಿ ಜನಮಾನಸದಲ್ಲಿ ಅಜರಾಮರವಾಗಿರುವರು. ವಂಶಪಾರಂಪರೆ ಇಲ್ಲಿಲ್ಲ.

**ಡಾ. ಬಿ ಆರ್ ಅಂಬೇಡ್ಕರ್**

ಡಾ. ಬಿ ಆರ್ ಅಂಬೇಡ್ಕರ್ ಇವರು ಅತ್ಯಂತ ಕೆಳವರ್ಗದಲ್ಲಿ ಜನಿಸಿ ಅಲ್ಲಿನ ತಾರತಮ್ಯ, ಅಸ್ಪೃಶ್ಯ ಮನೋಭಾವದ ಮನಸ್ಸನ್ನು ಖಂಡಿಸಿ ಅನೇಕ ಸಾಮಾಜಿ-ಕ ಅಡೆತಡೆಗಳನ್ನು ದಿಕ್ಕರಿಸಿ ಸಾಮಾಜಿ-ಕ ಹೋರಾಟಗಾರ ಮತ್ತು ಸಂವಿಧಾನ ಶಿಲ್ಪಿಯೆನಿಸಿದರು. ಇಲ್ಲಿಯೂ ವಂಶಪಾರಂಪರೆ ಎಂಬುದಿಲ್ಲ.

**ಶ್ರೀ ನಾರಾಯಣಮೂರ್ತಿ**

ಶ್ರೀ ನಾರಾಯಣಮೂರ್ತಿ ತಮ್ಮ ದೂರದೃಷ್ಟಿ ಮತ್ತು ಕಠಿಣ ಪರಿಶ್ರಮದಿಂದ ಜಾಗತಿಕ ಮಟ್ಟದ ಇನ್ಫೋಸಿಸ್ ಸಂಸ್ಥೆಯನ್ನು ಹುಟ್ಟುಹಾಕಿದರು. ಅದೀಗ ಕೋಟಿ ಮಂದಿಗೆ ಬದುಕಿನ ಮೂಲವಾಗಿದೆ. ಇಲ್ಲಿಯೂ ವಂಶಪಾರಂಪರೆ ಇಲ್ಲಾ.

**ಕಲ್ಪನಾ ಚಾವ್ಲಾ**

ಕಲ್ಪನಾ ಚಾವ್ಲಾ ತಮ್ಮ ಸಾಮರ್ಥ್ಯದಿಂದ ಅಂತರಿಕ್ಷಯಾನಿಯಾಗಿ ಇತಿಹಾಸ ನಿರ್ಮಿಸಿದ್ದಾರೆ.


**ಮೇರಿಕೋಮ್**

ಮೇರಿಕೋಮ್ ಸವಾಲುಗಳನ್ನು ಮೀರಿ ವಿಶ್ವಚಾಂಪಿಯನ್ನಾಗಿ ಹೊರಹೊಮ್ಮಿದರು.

**ಪಿ. ವಿ. ಸಿಂಧು**



ಪಿ. ವಿ. ಸಿಂಧು ಕಠಿಣ



ಪರಿಶ್ರಮದಿಂದ ವಿಶ್ವದ ಶ್ರೇಷ್ಟ ಬ್ಯಾಂಡ್ಮಿಂಟನ್ ಆಟಗಾರ್ತಿಯಲ್ಲಿ ಅಗ್ರಶ್ರೇಣಿಯಲ್ಲಿರುವರು.

ಹೀಗೇ ವಂಶಕ್ಕಿಂತ ಸಾಧನೆಯಲ್ಲಿ ತಮ್ಮ ಹಿರಿಮೆ ಗರಿಮೆ, ಪರಿಶ್ರಮ, ಕಠಿಣ ಸವಾಲುಗಳನ್ನು ಎದುರಿಸಿ ಇಂದು ಸಮಾಜದಲ್ಲಿ ಅವರವರ ಯೋಗ್ಯತೆಯನ್ನು ಮೀರಿ ಸಾಧನೆಯ ಹಾದಿಯಲ್ಲಿ ರಾಜ-ರಾಣಿಯರೇ ಆಗಿರುವರು. ತಮ್ಮ ಬುದ್ದಿವಂತಿಕೆ ಚಾಕಚಕ್ಯತೆಯಿಂದ ಸಾವಿರಾರು ಕೋಟಿ ಜನರಿಗೆ ಮಾದ-ರಿಯಾಗಿ, ಆದರ್ಶಪ್ರಾಯರಾಗಿರುವುದು ರಾಜನಿಗೆ ಸಮನಲ್ಲವೇ! ಹೆಸರನ್ನು ವಂಶ ಕೊಡಬಹುದು, ಆದರೆ ಗೌರವವನ್ನು ಸಾಧನೆ ಕೊಡುತ್ತದೆ. ಈ ಸಾಧನೆಯೇ ಎಲ್ಲರಲ್ಲಿ ಒಂದಾಗಿಯೂ ವಿಶಿಷ್ಟಸ್ಥಾನದ ಹಕ್ಕಿಗೆ ಗುರುತಿಸಲ್ಪಡುವುದು. ಇದು ಯಾವ ರಾಜನ ಮಗನಿಗೂ ಅವನ ಮಗನಾಗಿ ವಂಶಪರಂಪರೆಯಿಂದ ಪಡೆಯುವ ಸ್ಥಾನಮಾನಕ್ಕಿಂತ ಅಧಿಕ ಮೌಲ್ಯಯುತವಾದ ಸಾಧನೆಯೇ ಆಗಿರುತ್ತದೆ. ಇಲ್ಲಿ ವ್ಯಕ್ತಿಯ ವ್ಯಕ್ತಿತ್ವದ ಅಭ್ಯುದಯ ಉನ್ನತಿ ಕಾಣಬಹುದು. ಇದು ವಂಶದಿಂದಲ್ಲ ಅವನ ಸ್ವಂತ ವಿಶಿಷ್ಟ ವ್ಯಕ್ತಿತ್ವದ ಗಳಿಕೆಯಿಂದ ಮಾತ್ರ ಸಾಧ್ಯ.

ಲೇಖನ
– ಶೀತಲ್ ಹೆಗಡೆ



### ಅರಣ್ಯದ ಮಡಿಲಲ್ಲಿ ಮಂಜಿನ ಸೆರಗು ಹೊದ್ದು ಮಿನುಗುತ್ತಿರುವ ಸಾವಳಗಿ ಗುಡ್ಡ | ಮಳೆಗಾಲದಲ್ಲಿ ಪ್ರಕೃತಿ ಪ್ರೇಯರ ಆಕರ್ಷಣೆ | ಜಮಖಂಡಿಯಿಂದ ಕೇವಲ 25 ಕಿ.ಮೀ ದೂರ

# ನಿಸರ್ಗ ಪ್ರೇಯರ ರಮಣೀಯ ತಾಣ ಸಾವಳಗಿ ಗುಡ್ಡ

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಸಿದ್ರಾಮ್ ಎಮ್ ಇಟ್ಟಿ

ಜಮಖಂಡಿ: ಬೆಳಗಿನ ಜಾವ ಗುಡ್ಡದ ಮೇಲೆ ಕಾಲಿಟ್ಟರೆ ಸುತ್ತಮುತ್ತಲಿನ ಬೆಟ್ಟಗಳನ್ನು ಆವರಿಸಿಕೊಂಡಿರುವ ಮಂಜಿನ ಹೊದಿಕೆ, ಪಿಸುಗುಟ್ಟುವ ತಂಗಾಳಿ, ಮಳೆಯ ಹನಿಗಳಿಂದ ಪರಿಮಳ ಬೀರುವ ಮಣ್ಣಿನ ಸುವಾಸನೆ, ಪಕ್ಷಿಗಳ ಕಲರವ, ಗಾಳಿಗೆ ತೂಗಾಡುವ ಮರಗಳು ಇವೆಲ್ಲವೂ ಸೇರಿ ಪ್ರಕೃತಿಯ ಅದ್ಭುತ ಲೋಕವನ್ನೇ ಸೃಷ್ಟಿಸುತ್ತವೆ. ನಗರ ಜೀವನದ ಗದ್ದಲ ಮತ್ತು ಒತ್ತಡದಿಂದ ದೂರವಾಗಿ ಕೆಲ ಕ್ಷಣ ನೆಮ್ಮದಿಯಾಗಿ ಕಾಲ ಕಳೆಯಲು ಬಯಸುವವರಿಗೆ ಇದು ಪ್ರಕೃತಿಯೇ ನೀಡಿರುವ ಅಮೂಲ್ಯ ಉಡುಗೊರೆಯಾಗಿದೆ.

ಉತ್ತರ ಕರ್ನಾಟಕ ಎಂದರೆ ಬಿಸಿಲು, ಬರ, ಒಣ ಭೂಮಿ ಎಂಬ ಕಲ್ಪನೆ ಅನೇಕರಲ್ಲಿದೆ. ಆದರೆ ಆ ಕಲ್ಪನೆಯನ್ನು ಕ್ಷಣಾರ್ಧದಲ್ಲಿ ಬದಲಾಯಿಸುವಂತಹ ಪ್ರಕೃತಿಯ ಅಪರೂಪದ ಸ್ವರ್ಗ ಜಮಖಂಡಿ ತಾಲೂಕಿನಲ್ಲೇ ಅಡಗಿದೆ. ಅದುವೇ ಸಾವಳಗಿ ಗುಡ್ಡ. ಅರಣ್ಯದ ಮಡಿಲಲ್ಲಿ ನೆಲೆಸಿರುವ ಈ ಗುಡ್ಡ ಮಳೆಗಾಲದಲ್ಲಿ ಹಚ್ಚಹಸಿರಿನ ಹೊದಿಕೆ ಹೊದ್ದು, ಮಂಜಿನ ಸೆರಗು ಧರಿಸಿ, ಮೋಡಗಳ ನಡುವೆ ಕಂಗೊಳಿಸುತ್ತಿದ್ದು, ಪ್ರಕೃತಿ ಪ್ರಿಯರ ಮನಸ್ಸನ್ನು ಸೂರೆಗೊಳ್ಳುತ್ತಿದೆ.

ಜಮಖಂಡಿ ನಗರದಿಂದ ಸುಮಾರು 25 ಕಿಲೋಮೀಟರ್ ದೂರದಲ್ಲಿರುವ ಸಾವಳಗಿ ಗುಡ್ಡವನ್ನು ಕೇವಲ ಅರ್ಧ ಗಂಟೆಯಲ್ಲಿ ತಲುಪಬಹುದು. ವ್ಯೂ ಪಾಯಿಂಟ್‌ವರೆಗೆ ಕಾರು ಮತ್ತು ದ್ವಿಚಕ್ರ ವಾಹನಗಳು ಸಂಚರಿಸಬಹುದು. ಅಲ್ಲಿಂದ ಸ್ವಲ್ಪ ದೂರ ಕಾಲ್ನಡಿಗೆಯಲ್ಲಿ ಸಾಗಿದರೆ ಅರಣ್ಯದ ಮಧ್ಯೆ ತೆರೆದುಕೊಳ್ಳುವ ಪ್ರಕೃತಿಯ ಅದ್ಭುತ ದೃಶ್ಯ ಕಣ್ಮನ ಸೆಳೆಯುತ್ತದೆ.

ಇತ್ತೀಚೆಗೆ ಸುರಿದ ಮಳೆಯಿಂದ ಇಡೀ ಪ್ರದೇಶ ಹಚ್ಚಹಸಿರಿನಿಂದ ಕಂಗೊಳಿಸುತ್ತಿದೆ. ಗುಡ್ಡಗಳ ಇಳಿಜಾರುಗಳಲ್ಲಿ ಹಸಿರು ಹುಲ್ಲಿನ ಹಾಸು, ಮೋಡಗಳ ನೆರಳಿನಲ್ಲಿ ಮಿನುಗುವ ಕಣಿವೆಗಳು, ದೂರದವರೆಗೆ ಹರಡಿರುವ ಸಮತಟ್ಟು ಪ್ರದೇಶ, ಮಧ್ಯೆ ಮಧ್ಯೆ ಸುರಿಯುವ ತುಂತುರು ಮಳೆ ಈ ಎಲ್ಲ ದೃಶ್ಯಗಳು ಪ್ರವಾಸಿಗರನ್ನು ಮತ್ತೊಂದು ಲೋಕಕ್ಕೆ ಕರೆದೊಯ್ಯುವ ಅನುಭವ ನೀಡುತ್ತವೆ.

ವಾರಾಂತ್ಯಗಳಲ್ಲಿ ಬೈಕ್ ಸವಾರರ ತಂಡಗಳು, ಯುವಕರು, ಕುಟುಂಬ ಸಮೇತ ಆಗಮಿಸುವ ಪ್ರವಾಸಿಗರು, ಪ್ರಕೃತಿ ಛಾಯಾಗ್ರಾಹಕರು ಮತ್ತು ವಿಡಿಯೊ ಚಿತ್ರೀಕರಣ ತಂಡಗಳು ಸಾವಳಗಿ ಗುಡ್ಡಕ್ಕೆ




ಆಗಮಿಸುತ್ತಿದ್ದಾರೆ. ಗುಡ್ಡದ ಮೇಲಿನಿಂದ ಕಾಣುವ ಹಸಿರು ಬೆಟ್ಟಗಳು, ಮಂಜಿನ ಹೊದಿಕೆ ಮತ್ತು ಮೋಡಗಳ ಆಟವನ್ನು ತಮ್ಮ ಕ್ಯಾಮೆರಾಗಳಲ್ಲಿ ಸೆರೆಹಿಡಿಯಲು ಪ್ರವಾಸಿಗರು ಮುಗಿಬೀಳುತ್ತಿದ್ದಾರೆ. ಮಳೆಗಾಲದಲ್ಲಿ ಈ ಪ್ರದೇಶ ಪ್ರೀ-ವೆಡ್ಡಿಂಗ್ ಫೋಟೋಶೂಟ್ ಹಾಗೂ ಪ್ರಕೃತಿ ಛಾಯಾಗ್ರಹಣಕ್ಕೂ ಸೂಕ್ತ ತಾಣವಾಗಿ ಹೊರಹೊಮ್ಮುತ್ತಿದೆ.

ಅರಣ್ಯ ಪ್ರದೇಶದ ಮಧ್ಯದಲ್ಲಿರುವ ಈ ಗುಡ್ಡ ಪರಿಸರದ ದೃಷ್ಟಿಯಿಂದಲೂ ಅಪಾರ ಮಹತ್ವ ಹೊಂದಿದೆ. ವಿವಿಧ ಜಾತಿಯ ಮರಗಳು, ಔಷಧೀಯ ಸಸ್ಯಗಳು, ಪಕ್ಷಿಗಳ ಕಲರವ ಹಾಗೂ ಜೀವವೈವಿಧ್ಯ ಈ ಪ್ರದೇಶದ ವೈಶಿಷ್ಟ್ಯವಾಗಿದೆ. ಮಳೆಗಾಲದಲ್ಲಿ ಇಡೀ ಅರಣ್ಯ ಹಸಿರು ಹೊದಿಕೆ ಹೊದ್ದುಕೊಂಡು ನೈಸರ್ಗಿಕ ಶೀತಲ ವಾತಾವರಣವನ್ನು ಸೃಷ್ಟಿಸುತ್ತದೆ. ಹೀಗಾಗಿ ಇಲ್ಲಿ ಭೇಟಿ ನೀಡುವವರು ಪ್ರಕೃತಿಯ ಸೌಂದರ್ಯದ ಜೊತೆಗೆ ಪರಿಸರ ಸಂರಕ್ಷಣೆಯ ಮಹತ್ವವನ್ನೂ ಅರಿಯುತ್ತಾರೆ.

ಅರಣ್ಯ ಉಳಿದರೆ ಮಾತ್ರ ಪ್ರಕೃತಿ ಉಳಿವು: ಅರಣ್ಯದ ಮಧ್ಯದಲ್ಲಿರುವ ಈ ಅಪರೂಪದ ಪ್ರಕೃತಿ ತಾಣವನ್ನು ಸಂರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಪ್ರವಾಸಿಗರು ಪ್ಲಾಸ್ಟಿಕ್ ತ್ಯಾಜ್ಯ ಎಸೆಯದೆ, ಮದ್ಯಪಾನ, ಬೆಂಕಿ ಹಚ್ಚುವುದು ಅಥವಾ ಅರಣ್ಯಕ್ಕೆ ಹಾನಿಯಾಗುವ ಯಾವುದೇ ಚಟುವಟಿಕೆ ನಡೆಸದೆ ಜವಾಬ್ದಾರಿಯುತವಾಗಿ ವರ್ತಿಸಬೇಕು. ಪರಿಸರವನ್ನು ಕಾಪಾಡಿದರೆ ಮಾತ್ರ ಮುಂದಿನ ಪೀಳಿಗೆಗೂ ಸಾವಳಗಿ ಗುಡ್ಡದ ಈ ಅಪರೂಪದ ಸೌಂದರ್ಯವನ್ನು ಕಾಣುವ ಅವಕಾಶ ದೊರೆಯುತ್ತದೆ.

## ಇತಿಹಾಸ ಸಾರುವ ಶಿವಲಿಂಗೇಶ್ವರ ದೇವಾಲಯ



ಸಾವಳಗಿ ಗುಡ್ಡದ ಮತ್ತೊಂದು ಪ್ರಮುಖ ಆಕರ್ಷಣೆ ಜಗದ್ಗುರು ಶಿವಲಿಂಗೇಶ್ವರ ದೇವಾಲಯ. ಸುಮಾರು ಕ್ರಿ.ಶ. 1752ರ ಇತಿಹಾಸ ಹೊಂದಿದೆ ಎಂದು ಹೇಳಲಾಗುವ ಈ ದೇವಾಲಯ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಗುಡ್ಡದ ಮೇಲಿರುವ ಈ ದೇವಾಲಯಕ್ಕೆ ವರ್ಷಪೂರ್ತಿ ಭಕ್ತರು ಆಗಮಿಸುತ್ತಾರೆ. ಮಳೆಗಾಲದಲ್ಲಿ ದೇವಾಲಯದ ಸುತ್ತಮುತ್ತಲಿನ ಹಸಿರು ಪರಿಸರ ಹಾಗೂ ಮಂಜಿನ ವಾತಾವರಣ ಭಕ್ತರಿಗೆ ವಿಶಿಷ್ಟ ಆಧ್ಯಾತ್ಮಿಕ ಅನುಭವ ನೀಡುತ್ತದೆ.

## ಅಭಿವೃದ್ಧಿಗೆ ಕಾಯುತ್ತಿರುವ ಪ್ರವಾಸಿ ತಾಣ

ಇಷ್ಟೊಂದು ನೈಸರ್ಗಿಕ ಸೌಂದರ್ಯ ಹೊಂದಿದ್ದರೂ ಸಾವಳಗಿ ಗುಡ್ಡ ಇನ್ನೂ ರಾಜ್ಯದ ಪ್ರಮುಖ ಪ್ರವಾಸಿ ತಾಣಗಳ ಪಟ್ಟಿಯಲ್ಲಿ ತನ್ನ ಸ್ಥಾನ ಪಡೆಯಬೇಕಿದೆ. ಇಲ್ಲಿ ಮಾಹಿತಿ ಫಲಕಗಳು, ಸುರಕ್ಷತಾ ತಡೆಗೋಡೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ವಾಹನ ನಿಲುಗಡೆ, ವೀಕ್ಷಣಾ ಮಂಟಪ ಹಾಗೂ ಸ್ವಚ್ಛತಾ ವ್ಯವಸ್ಥೆ ಅಭಿವೃದ್ಧಿಪಡಿಸಿದರೆ ಉತ್ತರ ಕರ್ನಾಟಕದ ಪ್ರಮುಖ ಪರಿಸರ ಪ್ರವಾಸಿ ತಾಣವಾಗಿ ಬೆಳೆಯುವ ಸಾಮರ್ಥ್ಯ ಹೊಂದಿದೆ. ಇದರಿಂದ ಸ್ಥಳೀಯ ಯುವಕರಿಗೆ ಉದ್ಯೋಗಾವಕಾಶಗಳೂ ಹೆಚ್ಚಾಗಲಿವೆ.



### ಜಮಖಂಡಿ ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆಯಲ್ಲಿ ಅಗ್ನಿಶಾಮಕ ದಳದ ಅಣುಕು ಪ್ರದರ್ಶನ

## ಅಗ್ನಿ ಅವಘಡ ತಡೆಗೆ ಜಾಗ್ರತಿ ಅತ್ಯಗತ್ಯ :ಹೂಗಾರ

■ ಉದಯರಶ್ಮಿ ದಿನಪತ್ರಿಕೆ

ಜಮಖಂಡಿ: "ಅಗ್ನಿ ಅವಘಡಗಳು ಹೇಳಿ ಬರುವುದಿಲ್ಲ; ಆದರೆ ಮುನ್ನೆಚ್ಚರಿಕೆ ಮತ್ತು ಸಮಯಪ್ರಜ್ಞೆ ಇದ್ದರೆ ಅಪಾಯವನ್ನು ತಪ್ಪಿಸಬಹುದು" ಎಂಬ ಸಂದೇಶವನ್ನು ಸಾರುವ ಉದ್ದೇಶದಿಂದ ಜಮಖಂಡಿಯ ಪ್ರತಿಷ್ಠಿತ ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆಯಲ್ಲಿ ಗುರುವಾರ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಅಗ್ನಿ ನಂದಿಸುವ ವಿಧಾನಗಳ ಅಣುಕು ಪ್ರದರ್ಶನ ಹಾಗೂ ಜಾಗೃತಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಜಮಖಂಡಿ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಎಂ.ಎಸ್. ಹೂಗಾರ, "ಅಗ್ನಿ ಅವಘಡ ಸಂಭವಿಸಿದಾಗ ಗಾಬರಿಯಾಗದೇ ಧೈರ್ಯದಿಂದ ಸೂಕ್ತ ಕ್ರಮ ಕೈಗೊಂಡರೆ ಜೀವಹಾನಿ ಹಾಗೂ ಆಸ್ತಿಪಾಸ್ತಿಯ ನಷ್ಟವನ್ನು ಬಹುಮಟ್ಟಿಗೆ ತಡೆಯಬಹುದು. ಪ್ರತಿಯೊಬ್ಬ ವಿದ್ಯಾರ್ಥಿಯೂ ಅಗ್ನಿ ಸುರಕ್ಷತೆಯ ಮೂಲಭೂತ ಜ್ಞಾನ ಹೊಂದಿರುವುದು ಇಂದಿನ ಅಗತ್ಯವಾಗಿದೆ" ಎಂದು ಹೇಳಿದರು.

ಮನೆಗಳಲ್ಲಿ ಅಡುಗೆ ಅನಿಲ (ಐಕಲು) ಸೋರಿಕೆಯಾದಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾಗುವ ಬೆಂಕಿಯನ್ನು ನಿಯಂತ್ರಿಸುವ ವಿಧಾನಗಳು ಹಾಗೂ ಅಗ್ನಿ ನಂದಿಸುವ ಉಪಕರಣಗಳ ಬಳಕೆಯ ಕುರಿತು ಸಿಬ್ಬಂದಿ ಪ್ರಾಯೋಗಿಕ ಅಣುಕು ಪ್ರದರ್ಶನದ ಮೂಲಕ ವಿವರಿಸಿದರು. ಪ್ರದರ್ಶನವನ್ನು ವಿದ್ಯಾರ್ಥಿಗಳು ಕುತೂಹಲದಿಂದ ವೀಕ್ಷಿಸಿ ಅಗ್ನಿ ಸುರಕ್ಷತೆ ಕುರಿತ ಅನೇಕ ಮಾಹಿತಿಗಳನ್ನು ತಿಳಿದುಕೊಂಡರು.


ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ವೀರಭದ್ರಪ್ಪ ಮೆಂಡಗುದ್ಲಿ ಮಾತನಾಡಿ, "ಶಿಕ್ಷಣದ ಜೊತೆಗೆ ಜೀವನ ಕೌಶಲ್ಯ ಮತ್ತು ಸುರಕ್ಷತಾ ಅರಿವು ವಿದ್ಯಾರ್ಥಿಗಳಿಗೆ ಅತ್ಯಂತ ಅವಶ್ಯಕ ಎಂದರು.

ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ) ಪ್ರಾಚಾರ್ಯ ಡಾ. ರಾಜಾಗೌಡ ಕಾಗವಾಡೆ, "ಅಪಘಾತವನ್ನು ಎದುರಿಸುವುದಕ್ಕಿಂತ ಅದನ್ನು ತಡೆಗಟ್ಟುವ ಜಾಗೃತಿ ಬೆಳೆಸುವುದು ಶ್ರೇಷ್ಠ ಎಂದರು.

ಈ ಸಂದರ್ಭದಲ್ಲಿ ನರ್ಸಿಂಗ್ ಕಾಲೇಜು ಹಾಗೂ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ವೃಂದ, ಅಗ್ನಿಶಾಮಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ದಾಸೋಹ, ದಾನ-ಧರ್ಮ ಸಂಸ್ಕೃತಿ, ಸಂಸ್ಕಾರ ಅಗತ್ಯ :ಶಾಸಕ ಯತ್ನಾಳ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ವೀರಶೈವ ಲಿಂಗಾಯತರು ಬಸವಣ್ಣ ಕಂಡಂತಹ ಸಮುದಾಯವಿದೆ. ಅವರ ವಿಚಾರಧಾರೆ ಮೆಚ್ಚುವಂತಹದ್ದು. ದಾಸೋಹ, ದಾನಧರ್ಮ ಸಂಸ್ಕೃತಿ ಸಂಸ್ಕಾರ ಇರುವುದೇ ವೀರಶೈವ ಲಿಂಗಾಯತರಲ್ಲಿ. ಸಂಪ್ರದಾಯ, ಅನ್ನಪ್ರಸಾದ ಶಿಕ್ಷಣದ ಮಹತ್ವ ಮೂಲಕ ಸಮಾಜದ ಜನರಿಗೆ ಒಳ್ಳೆಯದನ್ನು ಮಾಡಬೇಕು ಹಿತವನ್ನು ಬಯಸುವ ನಮ್ಮ ವೀರಶೈವ ಲಿಂಗಾಯತರು ಒಂದಾಗಬೇಕು. ಒಗ್ಗೂಡಬೇಕು ಅಂದಾಗ ಮಾತ್ರ ಸಮಾಜ ಸಮೃದ್ಧಿಯಾಗಲು ಸಾಧ್ಯ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದ ವೀರಶೈವ ಲಿಂಗಾಯತ ಸಮುದಾಯ ಭವನದಲ್ಲಿ ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಕರ್ನಾಟಕ ರಾಜ್ಯ ಘಟಕ ವಿಜಯಪುರ ಜಿಲ್ಲಾ ಘಟಕದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಎರಡನೇ ದಿನದ ಕಾರ್ಯಾಗಾರದಲ್ಲಿ ಅವರು ಮುಖ್ಯ ಅತಿಥಿ ಸ್ಥಾನ ವಹಿಸಿ ಮಾತನಾಡಿದರು.

ಸಮಾರೋಪ ಸಮಾರಂಭದ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ ಸದ್ಗುರು ಅಭಿನವ ಸಿದ್ದಾರೂಢ ಸ್ವಾಮಿಗಳು ಆಶೀರ್ವಚನ ನೀಡಿ ವೀರಶೈವ ಲಿಂಗಾಯತ ಸಮಾಜದಲ್ಲಿ ಒಗ್ಗೂಡುವ ಕಾರ್ಯವಾಗಬೇಕು. ಮತ್ತೊಬ್ಬರ ಮನಸ್ಸನ್ನು ಮುರಿಯುವಂತಹ ಕೆಲಸವಾಗಬಾರದು. ಅಭಿಯಾನ, ಸ್ವಾಭಿಮಾನ ದೊಡ್ಡದು, ಸದೃಢ ಸಮಾಜವಾಗಬೇಕು ವೀರಶೈವ ತತ್ವ ಸಿದ್ಧಾಂತದಂತೆ ಎಲ್ಲರೂ ಕೂಡಿ ನಡೆಯಬೇಕು ಎಂದರು.

ಶಿರಶ್ಯಾಡದ ಅಭಿನವ ಮುರಗೇಂದ್ರ ಶಿವಾಚಾರ್ಯರು ಆಶೀರ್ವಚನ ನೀಡಿದರು. ನಾಲ್ಕನೇ ಗೋಷ್ಠಿಯಲ್ಲಿ ರಾಷ್ಟ್ರೀಯ ಕಾರ್ಯದರ್ಶಿ ಎಚ್.ಎಂ. ರೇಣುಕ ಪ್ರಸನ್ನ ಮಹಾಸಭೆಯ ಸಂವಿಧಾನ ಮತ್ತು ಸಂಘಟನೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ರಾಜ್ಯ ಯುವ ಅಧ್ಯಕ್ಷ ಮನೋಹರ ಅಬ್ಬಿಗೆರೆ , ಎಂ.ಜಿ. ಯಾದವಾಡ, ಆರ್.ಎಮ. ತೋಟದ, ಕಮಲಾ ಗೆಜ್ಜಿ ವಿಜಯಕುಮಾರ ಹುಂಡೇಕಾರ ಸಹದೇವ ನಾಡಗೌಡರ ಡಾ. ಸಂಗಮೇಶ ಮೇತ್ರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಐದನೇ ಗೋಷ್ಠಿಯಲ್ಲಿ ಪ್ರಸ್ತುತ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗುಉ ಜಿ. ಎಸ್.ಟಿ. ಸವಾಲುಗಳು ಕುರಿತು ಬಿ.ಎನ್. ಬಿರಾದಾರ, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಕಾರ್ಯಸ್ವರೂಪದ ಪರಿಚಯ ಕುರಿತು ಬಿರಾದಾರ ಉಪನ್ಯಾಸ ನೀಡಿದರು.

ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಘಟಕದ ಕಾರ್ಯನಿರ್ವಾಹಕ ಸಮಿತಿ ಹಾಗೂ ಇತರ ವಿಭಾಗಗಳ ಪದಾಧಿಕಾರಿಗಳು ಸಂಯುಕ್ತ ಸಭೆ ನಡೆಸಲಾಯಿತು.

ಇದೇ ಸಂದರ್ಭದಲ್ಲಿ ರಾಜ್ಯ ಘಟಕದ ಅಧ್ಯಕ್ಷರಿಂದ ಸಮಾರೋಪ ನುಡಿ ಸಲ್ಲಿಸಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಬಸವರಾಜ ಸಾಹುಕಾರ, ಎನ್. ಕುಮಸಗಿ, ಉಪಾಧ್ಯಕ್ಷ ಸಿದ್ರಾಮಪ್ಪ ಉಪ್ಪಿನ, ಜಿಲ್ಲಾಧ್ಯಕ್ಷ ವಿ.ಸಿ. ನಾಗಠಾಣ ರಾಜ್ಯ ಪ್ರಧಾನ ಕಾರ್ಯದರ್ಶಿ ನಟರಾಜ ಸಾಗರನಹಳ್ಳಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಬಸವರಜ ಅಪ್ಪು ಇಟ್ಟಂಗಿ, ಬಸವರಾಜ ಒಂಟಿಗೂಡಿ ಡಾ. ವಿ.ಡಿ. ಐಹೊಳ್ಳಿ, ಮಲ್ಲಿಕಾರ್ಜುನ ಅಮರಣ್ಣವರ, ಮಹಾದೇವ ಹಾಲಳ್ಳಿ ಸುಬಾಸ ಬೇಟಗೇರಿ, ಈರಣ್ಣ ತೊಂಡಿಕಟ್ಟಿ, ಜಗದೀಶ ಮೋಟಗಿ, ಸೇರಿದಂತೆ ರಾಜ್ಯ ವಿವಿಧ ಜಿಲ್ಲೆಗಳಿಂದ ಅಗಮಿಸಿದ್ದ ವೀರಶೈವ ಸಮಾಜದ ಮುಖಂಡರು ಮಹಿಳಾ ಪ್ರತಿನಿಧಿಗಳು ಯುವಕರು ಹಾಗೂ ನೂರಾರು ಕಾರ್ಯಕರ್ತರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಸಂಗಮೇಶ ಬದಾಮಿ ಸುಭಾಸ ಕನ್ನೂರ ಕಾರ್ಯಕ್ರಮ ನಿರೂಪಿಸಿದರು. ವಿ.ಎಸ್. ತೇಲಿ ವಂದಿಸಿದರು.


**ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ**
**ವಿಜಯಪುರ.**
**ಕುಲಸಚಿವರ ಕಛೇರಿ, ಜ್ಞಾನ-ಶಕ್ತಿ ಆವರಣ (ತೊರವಿ)**
**ದೂರವಾಣಿ: 08352-297064, ವೆಬ್‌ಸೈಟ್:www.kswu.ac.in**

ಸಂಖ್ಯೆ:ಕರಾಅಮವಿವಿ/ಉಗ್ರಾಣ/VGST/ಇ-ಟೆಂಡರ್ Call-3/2026-27/2248 ದಿನಾಂಕ:22.07.2026

**ಅಲ್ಪಾವಧಿ ಟೆಂಡರ್ Call-3 ಅಧಿಸೂಚನೆ ಪ್ರಕಟಣೆ**
**ಎರಡು ಲಕೋಟೆ ಪದ್ಧತಿ (ಇ-ಪ್ರೊಕ್ಯೂರ್‌ಮೆಂಟ್)**

ಕರ್ನಾಟಕ ಸರ್ಕಾರದ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1992-2000ರ ಪ್ರಕಾರ ಅಧಿನಿಯಮ 2000ರ ನಿಯಮದಂತೆ ನೊಂದಾಯಿತ ಅರ್ಹ ಏಜೆನ್ಸಿ/ಸರಬರಾಜುದಾರರಿಂದ/ ಗುತ್ತಿಗೆದಾರರಿಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ.

1) ಟೆಂಡರ್‌ಗಳನ್ನು ಸ್ವೀಕರಿಸುವ ಪ್ರಾರಂಭ **ದಿನಾಂಕ: 20.07.2026 ಮಧ್ಯಾಹ್ನ 4.00 ಗಂಟೆಗೆ.**
2) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 28.07.2026 ಮಧ್ಯಾಹ್ನ 4.00 ಗಂಟೆಯವರೆಗೆ.**
3) ಎಲ್ಲಾ ದಾಖಲೆಗಳನ್ನು ಸಲ್ಲಿಸುವ (ಹಾರ್ಡ್ ಕಾಫಿ) **ದಿನಾಂಕ: 28.07.2026 ಮಧ್ಯಾಹ್ನ 4.00 ಗಂಟೆಯವರೆಗೆ.**
4) ಟೆಕ್ನಿಕಲ್ ಬಿಡ್ ತೆರೆಯುವ **ದಿನಾಂಕ: 29.07.2026 ಮಧ್ಯಾಹ್ನ 4.00 ಗಂಟೆಯವರೆಗೆ.**
5) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30.07.2026 ಮಧ್ಯಾಹ್ನ 4.00 ಗಂಟೆ ಅಥವಾ ನಂತರ.**

ಉಳಿದ ವಿವರಗಳನ್ನು ಗುತ್ತಿಗೆ ದಸ್ತಾವೇಜುಗಳಲ್ಲಿ ನೋಡಬಹುದು.

**01.ಕಾಮಗಾರಿಯ ಹೆಸರು: Supplying & Installation of Machine Learning and IoT Laboratory for Teaching Learning & Research Under VGST project Phase-II at KSAWU, Vijayapura. ಟೆಂಡರ ಮೊತ್ತ ರೂ.5,52,000/- (Including GST). ಟೆಂಡರ್ ಸಂಖ್ಯೆ: KSAWU/Store/VGST/2026-27/IND/.** ಬಡ್ಡಿ ರಹಿತ ಇ.ಎಂ.ಡಿ ರೂ.22,600/-. ಟೆಂಡರ್ **ಅವಧಿ:45 ದಿನಗಳು.**

ಹೆಚ್ಚಿನ ವಿವರ / ವಿಚಾರಣೆಗೆ ಇ-ಪ್ರೋಕ್ಯೂರ್‌ಮೆಂಟ್ http://eproc.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಏಜೆನ್ಸಿದಾರರ ಅರ್ಹತೆ / ಟೆಂಡರಿನ ನಿಯಮ/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ, ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ http://eproc.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂಖ್ಯೆ:080-25501216, 9449662003 ರಿಂದ ಪಡೆಯಬಹುದಾಗಿದೆ.

**ಸಹಿ/- ಕುಲಸಚಿವರು,**
**ಕರ್ನಾಟಕ ರಾಜ್ಯ ಅಕ್ಕಮಹಾದೇವಿ**
**ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ**

ವಾಸಾಸಂಇ/ವಿಜಯಪುರ/222/ಕೆಎಸ್‌ಎಂಸಿಎ/2026-27



5ನೇ ವರ್ಷದ

**ಪುಣ್ಯ ಸ್ಮರಣೆ**



**ಶ್ರೀ ದಿ|| ಬಸಣ್ಣ ತಂದೆ ಚನ್ನಪ್ಪ ಬೆಲ್ಲದ**

ನೀವು ನಮ್ಮನಗಲಿ ಇಂದಿಗೆ ದಿ.24-07-2006 ಶುಕ್ರವಾರ ಕ್ಕೆ 5ವರ್ಷ ಸಂದಿತು. ನೀವು ಹಾಕಿಕೊಟ್ಟ ಉನ್ನತ ಆದರ್ಶ ಪರಂಪರೆಯಲ್ಲಿ ನಾವೆಲ್ಲರು ಮುನ್ನಡೆಯುತ್ತಿದ್ದೇವೆ

**ಶ್ರೀಮತಿ ಜಯಶ್ರೀ ಪ್ರಕಾಶ ಬೆಲ್ಲದ.**
**ಶ್ರೀಮತಿ ಪ್ರೀಯಾ ರೇವಣಸಿದ್ದಪ್ಪ ಬೆಲ್ಲದ.**

ಹಾಗು ಹೆಣ್ಣುಮಕ್ಕಳು,ಅಳಿಯಂದಿರು ಹಾಗು ಮೊಮಕ್ಕಳು

Advt.





## ಕೂಲಿಕಾರರು ವಲಸೆ ಹೋಗುವ ಅಗತ್ಯವಿಲ್ಲ :ಇಓ ಅಗ್ನಿ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ಕೂಲಿಕಾರರಿಗೆ ಸ್ಥಳೀಯವಾಗಿ ಉದ್ಯೋಗ ಒದಗಿಸುವ ದೃಷ್ಟಿಯಿಂದ ಮತ್ತಷ್ಟು ಅನುಕೂಲವಾಗುವ ರೀತಿಯಲ್ಲಿ ಮಾರ್ಪಾಡು ಮಾಡಿ ವಿಬಿ ಜಿ ರಾಮ್ ಜಿ ಯೋಜನೆಯನ್ನು ಜಾರಿಗೊಳಿಸಲಾಗಿದ್ದು ಅದರ ಉಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ಸಿಂದಗಿ ತಾಲೂಕು ಪಂಚಾಯತ್ ಇಓ ರಾಮು ಜಿ ಅಗ್ನಿ ಹೇಳಿದರು.

ಅವರು ತಾಲೂಕಿನ ಮಲಘಾಣ ಗ್ರಾಮ ಪಂಚಾಯತ ವ್ಯಾಪ್ತಿಯ ಮಲಘಾಣ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್‌ಂಡ್ ಅಜೀವಿಕಾ ಮಿಷನ್(ಗ್ರಾಮೀಣ) ಕಾಯ್ದೆ 2025 ಯೋಜನೆಯ ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮದಡಿ ಜನಜಾಗೃತಿ ಅಭಿಯಾನ ಕೈಗೊಂಡು ಕಾರ್ಯಕ್ರಮ ಉದ್ದೇಶೀಸಿ ಮಾತನಾಡುತ್ತಿದ್ದರು .

ಜುಲೈ -1 ರಿಂದ ನರೇಗಾ ಯೋಜನೆ ಬದಲಾಗಿ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಅಜೀವಿಕ ಮೀಷನ್ ಗ್ರಾಮೀಣ ಕಾಯ್ದೆ ಯೋಜನೆ ಜಾರಿಗೆ ಬಂದಿದೆ ಇದರ ಅನ್ವಯ ಹೊಸ ಕೂಲಿ ದರ 370.ರೂ ರಿಂದ 382.ರೂ ಗೆ ಹೆಚ್ಚಿಸಲಾಗಿದೆ ಹಾಗೂ ಮಾವನ ದಿನಗಳನ್ನು100 ರಿಂದ 125 ಕ್ಕೆ ಹೆಚ್ಚಿಸಲಾಗಿದೆ ಆದ್ದರಿಂದ ಕೂಲಿಕಾರರು ವಲಸೆ ಹೋಗದೆ ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಉದ್ಯೋಗವನ್ನು ಪಡೆಯುವ ಹಕ್ಕನ್ನು ಹೊಂದಿರುವ ಕುರಿತು ಮಾಹಿತಿ ನೀಡಿದರು ಅಕುಶಲ ಕೆಲಸ ಮಾಡಲು ಬಯಸುವ ಕೂಲಿಕಾರರು ಉದ್ಯೋಗ ಚೀಟಿ ಪಡೆದುಕೊಂಡಿದ್ದಲ್ಲಿ ನಮೂನೆ 6 ರಲ್ಲಿ ತಮ್ಮ ಅರ್ಜಿಯನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸಬೇಕಾಗುತ್ತದೆ. ಮುಂದುವರೆದು 318 ಅನುಮೋದಿತ ಕಾಮಗಾರಿಗಳಲ್ಲಿ ತಮ್ಮ ಗ್ರಾಮದ ಮೂಲ ಸೌಕರ್ಯ ಅಭಿವೃದ್ಧಿಗೆ ಅಗತ್ಯವಿರುವ ಕಾಮಗಾರಿಗಳ ಜೊತೆಗೆ ರೈತರಿಗೆ ಅನುಕೂಲವಾಗುವ ಕಾಮಗಾರಿಗಳನ್ನು ಕೂಡಾ ಅನುಷ್ಠಾನಗೊಳಿಸಲು ಅವಕಾಶವಿರುವುದರಿಂದ ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕೆಂದು ಸವಿವರವಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಮಾಹಿತಿ ಶಿಕ್ಷಣ ಮತ್ತು ಸಂವಹನ ಸಂಯೋಜಕರಾದ ಬಸವರಾಜ ಹುಣಸಗಿ, ಕಾರ್ಯದರ್ಶಿಗಳಾದ ನೀಲಮ್ಮ ಬಿರಾದಾರ, ಗ್ರಾಮಕಾಯಕ ಮಿತ್ರ ಶ್ರೀಮತಿ ಭಾಗ್ಯಶ್ರೀ ಪರಗೊಂಡ, ರಾಜಶ್ರೀ ಹರಿಜನ ಸೇರಿದಂತೆ, ಗ್ರಾಮ ಪಂಚಾಯಿತಿ ಸಿಬ್ಬಂದಿಗಳಾದ ಆರಿಫ್, ಶಂಕರ ಹಾಗೂ ಗ್ರಾಮಸ್ಥರು ಹಾಜರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR